ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಸಂಜು ಸ್ಯಾಮ್ಸನ್ ಹಾಗು ಡೆವಾಲ್ಡ್ ಬ್ರೆವಿಸ್ ಅವರ ಭರ್ಜರಿ ಆಟದ ನೆರವಿನಿಂದ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ 5 ವಿಕೆಟ್ ನಷ್ಟಕ್ಕೆ 192 ರನ್ ಗಳಿಸಿದೆ.

15 ಏಪ್ರಿಲ್ 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 36 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ರೋಗ ನಿರೋಧ ಶಕ್ತಿ ಹೆಚ್ಚಿಸ ಬಲ್ಲ ಹುಣಸೆ ಹುಳಿ » 2



ತುಳಿತಕ್ಕೊಳಗಾದವರಿಗೆ ಧ್ವನಿಯಾದ ಅಂಬೇಡ್ಕರ್



ಕಳಪೆ ರಸ್ತೆ ಕಾಮಗಾರಿ : ಶಾಸಕ ಸುರೇಶ್ ತರಾಟೆ » 4

# ಕಾಂಗ್ರೆಸ್ ಬೇಗುದಿ: ಮುಸ್ಲಿಂ ನಾಯಕರ ತಲೆದಂಡ

## ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ವಜಾ | ಸಚಿವ ಜಮೀರ್ ಅಹ್ಮದ್ ಮೇಲೂ ತೂಗುಗತ್ತಿ

• ಪ್ರಜೋದಯ ವರದಿ

**ಬೆಂಗಳೂರು:** ನಾಯಕತ್ವ ಬದಲಾವಣೆ ಮತ್ತು ಸಚಿವ ಸಂಪುಟ ಪುನರ್ ರಚನೆ ಗೊಂದಲದ ನಡುವೆಯೇ ದಾವಣಗೆರೆ ಉಪ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯ ಕಾಂಗ್ರೆಸ್‌ನಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಯಾಗಿದೆ.

ದಾವಣಗೆರೆ ಟಿಕೆಟ್ ತಿಕ್ಕಾಟದಿಂದ ಆರಂಭವಾಗಿದ್ದ ಕಾಂಗ್ರೆಸ್ ಬಂಡಾಯದ ಬಿಸಿ ಅಬ್ದುಲ್ ಜಬ್ಬಾರ್ ಹಾಗು ನಸೀರ್ ಅಹ್ಮದ್ ನಂತರ ಈಗ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರಿಗೂ ತಟ್ಟಿದೆ. ಮಂಗಳವಾರ ಬೆಳಿಗ್ಗೆ ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಂಗಳೂರಿನ ಕಾವೇರಿ ನಿವಾಸದಲ್ಲಿ ಭೇಟಿ ಮಾಡಿದ್ದು, ರಾಜ್ಯ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿದೆ. ಪಕ್ಷದ ಆಂತರಿಕ ವಿದ್ಯಮಾನಗಳ ಹಿನ್ನಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಸಚಿವ ಜಮೀರ್ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ಹೈ ಕಮಾಂಡ್ ಕೆಂಗಣ್ಣಿನ ಕುರಿತು ಎಚ್ಚರಿಕೆ ನೀಡಿದ್ದಾರೆ.

ಪಕ್ಷದೊಳಗೆ ಬಂಡಾಯಕ್ಕೆ ಪ್ರಚೋದನೆ ನೀಡುತ್ತಿರುವ ಆರೋಪ ಜಮೀರ್ ಅವರ



ವಿರುದ್ಧ ಕೇಳಿ ಬರುತ್ತಿದ್ದು, ಈ ಬಗ್ಗೆ ಹೈಕಮಾಂಡ್ ಹಂತದಲ್ಲಿ ದೂರುಗಳು ಸಲ್ಲಿಕೆಯಾಗಿವೆ ಎಂದು ಮುಖ್ಯಮಂತ್ರಿ ಅಸಮಾಧಾನ ಹೊರಹಾಕಿದ್ದಾರೆ. ಬಂಡಾಯದ ವಿಚಾರವಾಗಿ ನಿನ್ನ ಮೇಲೆ ಹೈಕಮಾಂಡ್ ಸಿಟ್ಟಾಗಿದೆ. ನೀನೇ ಹೈಕಮಾಂಡ್‌ಗೆ ಸರಿಯಾದ ಸಮಜಾಯಿಷಿ ನೀಡಬೇಕೆಂದು ತಾಕೀತು ಮಾಡಿದ್ದಾರೆ.

ಪ್ರತಿಕ್ರಿಯಿಸಿದ ಜಮೀರ್ ಅಹ್ಮದ್, ನಾನು ಪಕ್ಷದ ವಿರುದ್ಧ ಯಾವುದೇ ಕೆಲಸ ಮಾಡಿಲ್ಲ. ಕೇವಲ ಸಮುದಾಯಕ್ಕೆ ಟಿಕೆಟ್ ನೀಡುವಂತೆ ವಿನಂತಿಸಿದ್ದೆ. ನಿಮ್ಮ ಸೂಚನೆಯಂತೆ ದಾವಣಗೆರೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಅಭ್ಯರ್ಥಿ ಪರ ಕೆಲಸ ಮಾಡಲು ಸೂಚಿಸಿದ್ದೇನೆಂದು ಸಮರ್ಥಿಸಿಕೊಂಡರು. ರಿಜ್ವಾನ್ ಅರ್ಷದ್ ಹಾಗು ಸಲೀಂ ಅಹ್ಮದ್ ಅವರಿಗೆ ಜವಾಬ್ದಾರಿ ನೀಡಿದ್ದ ರಿಂದ ಕೇರಳ ಚುನಾವಣಾ ಪ್ರಚಾರ ಹಾಗು ವೈಯಕ್ತಿಕ ಕಾರಣಗಳಿಂದ ಮುಂಬೈಗೆ ತೆರಳಿದ್ದಾಗಿ ವಿವರಣೆ ನೀಡಿದರು.

ಜಮೀರ್ ಅವರ ಸುದೀರ್ಘ ಸ್ಪಷ್ಟನೆ ಆಲಿಸಿದ ಮುಖ್ಯಮಂತ್ರಿ, ಹೈಕಮಾಂಡ್ ನಾಯಕರ ಜೊತೆ ನೇರವಾಗಿ ಮಾತನಾಡುವಂತೆ ಸೂಚಿಸಿದರು. ಈ ಚರ್ಚೆಯ ನಂತರ ಇಬ್ಬರೂ ನಾಯಕರು ಒಂದೇ ಕಾರಿನಲ್ಲಿ ವಿಧಾನಸೌಧಕ್ಕೆ ತೆರಳಿರುವುದು ಕುತೂಹಲಕ್ಕೆ ಕಾರಣವಾಗಿದೆ.

> **"ಸಂಪುಟ ಪುನಾರಚನೆಯ ಸುಳಿವು ಇದೆ. ಈ ಮುನ್ಸೂಚನೆ ಇರೋದರಿಂದಲೇ 30 ಮಂದಿ ಶಾಸಕರು ಸಚಿವ ಸ್ಥಾನಕ್ಕಾಗಿ ದೆಹಲಿಗೆ ಹೋಗಿದ್ದಾರೆ. ಮೂರ್ನಾಲ್ಕು ಬಾರಿ ಶಾಸಕರಾದವರು ಸಚಿವ ಸ್ಥಾನ ಕೇಳುವುದು ಅವರ ಹಕ್ಕು, ಅದರಲ್ಲಿ ತಪ್ಪೇನಿಲ್ಲ. ಆದರೆ, ಮುಖ್ಯಮಂತ್ರಿ ಬದಲಾವಣೆ ವಿಚಾರ ಆಗಲಿ ಅಥವಾ ಸಂಪುಟ ಪುನಾರಚನೆ ಆಗಲಿ ಎಲ್ಲವೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ.**
> **- ಜಿ.ಪರಮೇಶ್ವರ್, ಗೃಹ ಸಚಿವ**

### ಜಮೀರ್ ಶಿಸ್ತು ಪಾಲಿಸಿಲ್ಲ: ಡಿ.ಕೆ.ಶಿ.

ಯಾವುದೇ ಪಕ್ಷವಾದರೂ ಶಿಸ್ತು ಬಹಳ ಮುಖ್ಯ. ಆದರೆ, ಜಮೀರ್ ಅಹ್ಮದ್ ಪಕ್ಷದ ಶಿಸ್ತನ್ನು ಪಾಲಿಸಿಲ್ಲ, ಎಲ್ಲರನ್ನು ವಿಶ್ವಾಸಕ್ಕೆ ಪಡೆದುಕೊಂಡೇ ಅಭ್ಯರ್ಥಿ ಆಯ್ಕೆ ಮಾಡಿದ್ದೆವು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದ್ದಾರೆ. ನಮ್ಮ ನಾಯಕರ ವರದಿಗಳ ಆಧಾರದ ಮೇಲೆ, ತಮ್ಮದೇ ಆದ ವಿವಿಧ ಮೂಲಗಳಿಂದ ಮಾಹಿತಿ ಪಡೆದು, ಪಕ್ಷದ ಹಿತದೃಷ್ಟಿಯಿಂದ ನಜೀರ್ ಅಹ್ಮದ್ ವಿಚಾರದಲ್ಲಿ ಮುಖ್ಯಮಂತ್ರಿ ತೀರ್ಮಾನ ತೆಗೆದುಕೊಂಡಿದ್ದಾರೆ. ಜಮೀರ್ ಅವರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದೇ ಎಂದು ಕೇಳಿದಾಗ, ಇದರ ಬಗ್ಗೆ ನನಗೆ ಮಾಹಿತಿ ಇಲ್ಲವೆಂದರು.



**ನಸೀರ್ ಅಹ್ಮದ್ ವಿರುದ್ಧ ಕ್ರಮ**

ಅಬ್ದುಲ್ ಜಬ್ಬಾರ್ ರಾಜೀನಾಮೆಯ ಬೆನ್ನಲ್ಲೇ ನಸೀರ್ ಅಹ್ಮದ್ ಅವರಿಗೂ ರಾಜೀ ನಾಮೆ ನೀಡುವಂತೆ ಸೂಚನೆ ನೀಡಲಾಗಿತ್ತು. ಆದರೆ, ಅವರು ಅದಕ್ಕೆ ಒಪ್ಪಿರಲಿಲ್ಲ. ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಹುದ್ದೆಗೆ ರಾಜೀನಾಮೆ ನೀಡುವುದಿಲ್ಲ ಎಂದು ಬಿಗಿ ಪಟ್ಟು ಹಿಡಿದಿದ್ದರು. ಈ ಬೆಳವಣಿಗೆಯ ಬೆನ್ನಲ್ಲೇ ಅವರನ್ನು ಹುದ್ದೆಯಿಂದ ಬಿಡುಗಡೆಗೊಳಿಸಲಾಗಿದೆ. ಇದು ಕಾಂಗ್ರೆಸ್‌ನಲ್ಲಿ ಬಣ ರಾಜಕೀಯ ಮತ್ತೊಂದು ಹಂತಕ್ಕೆ ತಲುಪಲಿದೆ ಎಂಬ ಸ್ಪಷ್ಟ ಸಂದೇಶವನ್ನು ನೀಡಿದೆ.

# ಅಂಬೇಡ್ಕರ್ ಜಯಂತಿಗೆ ಆಹ್ವಾನಿಸಿಲ್ಲ

## ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅಸಮಾಧಾನ

• ಪ್ರಜೋದಯ ವರದಿ

**ಹೊಳೆನರಸೀಪುರ:** ತಾಲ್ಲೂಕು ಆಡ ಳಿತದಿಂದ ಆಚರಣೆ ಮಾಡುತ್ತಿರುವ ಅಂಬೇಡ್ಕರ್ ಜಯಂತಿಗೆ ನನಗೆ ಕನಿಷ್ಠ ಆಹ್ವಾನ ಪತ್ರಿಕೆಯನ್ನೂ ನೀಡಿಲ್ಲ. ಕಾರಣ ಏನೆಂಬುದು ನನಗೆ ಗೊತ್ತಿಲ್ಲ ವೆಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಅಸಮಾಧಾನ ವ್ಯಕ್ತ ಪಡಿಸಿದರು.

ಮಂಗಳವಾರ ಡಾ.ಬಿ.ಆರ್.ಅಂಬೇಡ್ಕರ್ ಅವರ 135 ನೇ ಜಯಂತಿ ಪ್ರಯುಕ್ತ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಬಳಿ ಇರುವ ಅಂಬೇಡ್ಕರ್ ಅವರ ಕಂಚಿನ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ನನಗೆ ಆಹ್ವಾನ ಪತ್ರಿಕೆ ನೀಡ ಬೇಡಿ ಎಂದು ಯಾರು ಹೇಳಿದ್ದರೂ ಗೊತ್ತಿಲ್ಲ. ಆದರೂ ಅಂಬೇಡ್ಕರ್ ಮೇಲಿನ ಗೌರವದಿಂದ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದ್ದೇನೆಂದು ಹೇಳಿದರು.

ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ತತ್ವ ಸಿದ್ಧಾಂತಗಳು ಸರ್ವ ಕಾಲಕ್ಕೂ ಸಲ್ಲು ತ್ತವೆ. ಸರ್ವರಿಗೂ ಸಮಪಾಲು ಸರ್ವ ರಿಗೂ ಸಮಬಾಳು ಎಂಬ ಆಶಯ ವನ್ನು ಹೊಂದಿದ ಅಂಬೇಡ್ಕರ್ ಅವರ ಚಿಂತನೆಗಳು ಕೇವಲ ಒಂದು ಜಾತಿ, ವರ್ಗಕ್ಕೆ ಸೀಮಿತವಾಗದೆ. ಇಡೀ ಮನುಕುಲದ ಏಳಿಗೆ ಬಯಸುವ ಗುರಿ ಹೊಂದಿದ್ದವು. ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಟ ಮಾಡಿ, ದೀನ ದಲಿತರ



ಉದ್ಧಾರಕ್ಕೆ ಶಿಕ್ಷಣವೇ ಮೂಲಾಧಾರ ಎಂದು ನಂಬಿದ್ದರು. ಪ್ರಜಾ ಪ್ರಭುತ್ವವು ಕೇವಲ ಸರ್ಕಾರಿ ವ್ಯವಸ್ಥೆ ಯಲ್ಲ, ಅದು ಸಹಬಾಳ್ವೆಯ ಮಾರ್ಗ ಎಂದು ಪ್ರತಿಪಾದಿಸಿದ ವಿಶ್ವ ಮಾನವ ಅಂಬೇಡ್ಕರ್ ಎಂದು ಹೇಳಿದರು.

ಇದೇ ವೇಳೆ ಪಟ್ಟಣದ ಪ್ರಮುಖ ರಸ್ತೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾ ತಂಡಗಳ ವರ್ಣ ರಂಜಿತ ಪ್ರತಿಭಾ ಪ್ರದರ್ಶನದೊಂದಿಗೆ ಹೂವಿನ ಅಲಂಕಾರದೊಂದಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರವನ್ನು ಬೆಳ್ಳಿ ರಥದಲ್ಲಿ ಮಂಗಳ ವಾದ್ಯಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಈ ಸಂದರ್ಭದಲ್ಲಿ ಕೆ.ಆರ್.ಸುದರ್ಶನ ಕುಮಾರ್ (ಬಾಬು), ಎಚ್ ವೈ.ಚಂದ್ರಶೇಖರ್, ರಾಘವೇಂದ್ರ, ವಕೀಲ ಹರೀಶ್, ಈಶ್ವರ್ ಸೇರಿ ವಿವಿಧ ಸಂಘ ಸಂಸ್ಥೆಗಳ ಸದಸ್ಯರು ಇದ್ದರು.

# ಸೆಟ್‌ಬ್ಯಾಕ್ ಸಮಸ್ಯೆ ಬಗೆಹರಿಸಲು ಚರ್ಚೆ: ಶೀಘ್ರ ಪರಿಹಾರ

• ಪ್ರಜೋದಯ ವರದಿ

**ಹಾಸನ :** ಕಟ್ಟಡ, ಮನೆಗಳ ನಿರ್ಮಾಣ ಸಂಬಂಧ ಜನರು ಎದುರಿಸುತ್ತಿರುವ ಸೆಟ್‌ಬ್ಯಾಕ್ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಶಾಸಕರು ಸಂಬಂಧಪಟ್ಟ ಅಧಿಕಾರಿಗಳು, ಸಚಿವರೊಂದಿಗೆ ಚರ್ಚಿಸಿದ್ದೇವೆ. ಶೀಘ್ರದಲ್ಲೇ ಸೆಟ್ ಬ್ಯಾಕ್ ನಿಯಮಗಳನ್ನು ಸಡಿಲಗೊಳಿಸಿ ಸಮಸ್ಯೆ ಪರಿಹರಿಸಲಾಗುವುದೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚಿಕ್ಕ ನಿವೇಶನದಲ್ಲಿ ಮನೆ ಕಟ್ಟಿಕೊಳ್ಳುವವರು ಕೂಡ ಹೆಚ್ಚಿನ ಜಾಗವನ್ನು ಸೆಟ್ ಬ್ಯಾಕ್ ಬಿಡಬೇಕಾಗಿರುವುದರಿಂದ ಜನರು ಸಮಸ್ಯೆ ಎದುರಿಸುತ್ತಿದ್ದಾರೆ. 30X40 ಅಥವಾ 20X30 ನಿವೇಶದಲ್ಲಿ ಮನೆ ಕಟ್ಟಿಕೊಳ್ಳುವ ಪ್ರತಿಹಂತದಲ್ಲೂ ಆ್ಯಪ್ ಮೂಲಕ ಜಿಪಿಎಸ್ ಮಾಡಿ, ಅನುಮತಿ ನೀಡುತ್ತಿರುವುದರಿಂದ ಸುಂದರ ಮನೆ ಕಟ್ಟಿಕೊಳ್ಳ ಬೇಕೆನ್ನುವರಿಗೆ ತೊಂದರೆಯಾಗಿದೆ. ಈ ಬಗ್ಗೆ ಸರ್ಕಾರ ಗಮನ ಸೆಳೆಯಲಾಗಿದೆ ಎಂದು ತಿಳಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅವರು ಪ್ರಸ್ತುತ ಬೆಂಗಳೂರಿಗೆ ಮಾತ್ರ ಸೆಟ್‌ಬ್ಯಾಕ್ ನಿಯಮ ಸಡಿಕೆಗೆ ಅನುಮತಿ ನೀಡಿದ್ದಾರೆ. ನಮ್ಮೆಲ್ಲರ ಮನವಿ ಮೇರೆಗೆ ರಾಜ್ಯಾದ್ಯಂತ ನಿಯಮ ಸಡಿಲಿಕೆ ಮಾಡಲು ಚರ್ಚೆ ನಡೆದಿದೆ. ಈ ಬಗ್ಗೆ ಅಧಿವೇಶನದ ಸಮಯದಲ್ಲೂ ಸಂಬಂಧಪಟ್ಟವರ ಗಮನಕ್ಕೆ ತಂದಿದ್ದೇವೆ. ನಮ್ಮ ಮನವಿಯನ್ನು ಗಣನೆಗೆ ತೆಗೆದುಕೊಳ್ಳುವುದಾಗಿ ಭರವಸೆ ನೀಡಿರುವುದರಿಂದ ಶೀಘ್ರದಲ್ಲೇ ಸೆಟ್ ಬ್ಯಾಕ್‌ಗೆ ಬಿಡಬೇಕಾದ ಜಾಗವನ್ನು ಕಡಿಮೆ ಮಾಡಲಾಗುತ್ತದೆ ಎಂದು ಹೇಳಿದರು.

ಮನೆ ಕಟ್ಟಿಕೊಳ್ಳುವ ಎಲ್ಲಾ ಸಾರ್ವಜನಿಕರಿಗೆ ಕಟ್ಟಡ ಪರವಾನಗಿ, ಸೆಟ್ ಬ್ಯಾಕ್ ಕಡಿಮೆ ಮಾಡುವ ಚರ್ಚೆ ಅಂತಿಮ ಹಂತದಲ್ಲಿ ಇರುವುದರಿಂದ ಜನರು ಸ್ವಲ್ಪ ದಿನ ಶಾಂತ ರೀತಿಯಲ್ಲಿದ್ದರೆ ಸಮಸ್ಯೆ ಬಗೆಹರಿಯಲಿದೆ. ಸಾರ್ವಜನಿಕರಿಗರಿಗೆ ಅನುಕೂಲವಾಗುವಂತೆ ಕ್ರಮ ಜಾರಿಯಾಗಲಿದೆ. ಜನರು ಹಾಗು ಕಟ್ಟಡ ನಿರ್ಮಾಣದ ಗುತ್ತಿಗೆದಾರರು ಭಯ ಪಡುವ ಅಗತ್ಯವಿಲ್ಲವೆಂದು ಸ್ಪಷ್ಟಪಡಿಸಿದರು.



# ಅಂಬೇಡ್ಕರ್ ಆಶಯ ಅರಿತು ಅಭಿವೃದ್ಧಿಗೆ ಶ್ರಮಿಸಬೇಕು

## ಸಮಾನತೆ ಸಮಾಜ ನಿರ್ಮಾಣದಿಂದಲೇ ಗೌರವ : ಸಂಸದ ಶ್ರೇಯಸ್ ಪಟೇಲ್

• ಪ್ರಜೋದಯ ವರದಿ

**ಹಾಸನ:** ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಗಳು ಸಮಾನತೆ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಮಹತ್ವವನ್ನು ನಮಗೆ ಸಾರುತ್ತವೆ. ಅವರ ಆಶಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗಾಗಿ ಶ್ರಮಿಸಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ತಿಳಿಸಿದರು.

ನಗರದ ಹಾಸನಾಂಬ ಕಲಾ ಕ್ಷೇತ್ರದಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿ ಪ್ರತಿಯೊಬ್ಬ ಪ್ರಜೆಯೂ ಕೂಡ ಸ್ವತಂತ್ರವಾಗಿ, ಸಮಾನತೆಯಿಂದ ಬದುಕಲು ಕಾರಣರಾದ ಅಂಬೇಡ್ಕರ್ ಅವರು ಇಡೀ ದೇಶಕ್ಕೆ ನಾಯಕರಾಗಿದ್ದಾರೆ. ಅವರ ಚಿಂತನೆಗಳು ಸದಾ ನಮಗೆ ದಾರಿ ದೀಪವಾಗಿದ್ದು, ಸಮಾನತೆಯ ಸಮಾಜ ನಿರ್ಮಾಣವೇ ಅವರಿಗೆ ಸಲ್ಲಿಸುವ ನಿಜವಾದ ಗೌರವ ಎಂದರು.



ಅಂಬೇಡ್ಕರ್ ಅವರ ಪುಸ್ತಕಗಳನ್ನು ಓದಲು ವರ್ಷದ 365 ದಿನಗಳು ಸಾಲದು. ಅವರ ಜಯಂತಿ ದಿನ ಮಾತ್ರ ಬಾಬಾ ಸಾಹೇಬ್ ಅವರನ್ನು ನೆನೆಯದೆ, ಪ್ರತಿ ದಿನ ಅವರು ನೀಡಿರುವ ಮಾರ್ಗದಲ್ಲೇ ನಡೆಯಬೇಕೆಂದು ಹೇಳಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಪದ್ಧತಿಗಳನ್ನು ರೂಪಿಸಿ ಕಾನೂನು ಚೌಕಟ್ಟಿನಲ್ಲಿ ಎಲ್ಲರೂ ತಮ್ಮ-ತಮ್ಮ ಜವಾಬ್ದಾರಿಗಳನ್ನು ನಿಭಾಯಿಸಲು ಸಂವಿಧಾನದಲ್ಲಿ ಅವಕಾಶ ನೀಡಿದ ಕೀರ್ತಿ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ. ಇಂದು ನಮ್ಮ ದೇಶ ಮಾತ್ರವಲ್ಲದೆ ವಿವಿಧ ದೇಶಗಳಲ್ಲಿ ಕೂಡ ಅಂಬೇಡ್ಕರ್ ಅವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವುದು ಅವರ ಕೊಡುಗೆ ಹಿಡಿದ ಕೈಗನ್ನಡಿಯಾಗಿದೆ. ಅಂಬೇಡ್ಕರ್ ಕೇವಲ ಒಬ್ಬ ವ್ಯಕ್ತಿಯಲ್ಲ, ಅವರೊಂದು ಶಕ್ತಿ. ಅವರ ಸಂವಿಧಾನದ ರಚನೆ ಹಿಂದಿನ ಅನ್ವೇಷಣೆ ತರ್ಕಕ್ಕೆ ನಿಲುಕದ್ದಾಗಿದೆ ಎಂದು ಹೇಳಿದರು.

» ನಾಲ್ಕನೇ ಪುಟದಲ್ಲಿ

# ಅಂಬೇಡ್ಕರ್ ಪುತ್ಥಳಿಗೆ ಅಗೌರವ : ಖಂಡನೆ

## ಶಾಸಕ ಹೆಚ್.ಕೆ.ಸುರೇಶ್ ನೇತೃತ್ವದಲ್ಲಿ ಪ್ರತಿಭಟನೆ : ತಹಶೀಲ್ದಾರ್ ವಿರುದ್ಧ ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿಯಂದು ತಾಲ್ಲೂಕು ಆಡಳಿತ ಪುತ್ಥಳಿಗೆ ಅಗೌರವ ಸೂಚಿಸಿದೆ ಎಂದು ಆರೋಪಿಸಿ ಶಾಸಕ ಹೆಚ್.ಕೆ.ಸುರೇಶ್ ನೇತೃತ್ವದಲ್ಲಿ ದಲಿತ ಸಂಘಟನೆಗಳ ಮುಖಂಡರು ತಾಲ್ಲೂಕು ಕಚೇರಿ ಮುಂಭಾಗದ ಅಂಬೇಡ್ಕರ್ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಅಂಬೇಡ್ಕರ್ ಪುತ್ಥಳಿಗೆ ಬೇಕಾಬಿಟ್ಟಿ ಅಲಂಕಾರ ಮಾಡಿದ್ದು, ಸ್ವಚ್ಛತೆ ಮಾಡಿಲ್ಲವೆಂದು ಆರೋಪಿಸಿದರು. ಈ ವೇಳೆ ಜಯಂತಿ ಕಾರ್ಯಕ್ರಮ ಬಹಿಷ್ಕಾರ ಮಾಡುವ ಮೂಲಕ ದಲಿತ ಸಂಘಟನೆಗಳ ಜೊತೆಗೆ ಶಾಸಕರು ಕೂಡ ಪ್ರತಿಭಟನೆಯಲ್ಲಿ ಭಾಗಿಯಾದರು. ಅವಮಾನ ಮಾಡಿರುವ ತಹಶೀಲ್ದಾರ್ ಅವರನ್ನು ತಕ್ಷಣ ಅಮಾನತು ಮಾಡಬೇಕು ಹಾಗು ಸ್ಥಳಕ್ಕೆ



ಜಿಲ್ಲಾಧಿಕಾರಿ ಆಗಮಿಸಬೇಕೆಂದು ಅಂಬೇಡ್ಕರ್ ಪುತ್ಥಳಿ ಬಳಿ ಕುಳಿತು ಪಟ್ಟು ಹಿಡಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಶಾಸಕರು, ಅಂಬೇಡ್ಕರ್ ಜಯಂತಿಯಲ್ಲಿ ಜಿಲ್ಲಾಧಿಕಾರಿ ಪಾಲ್ಗೊಳ್ಳುತ್ತಿರುವುದರಿಂದ ಸ್ಥಳಕ್ಕೆ ಆಗಮಿಸಲು ಸಾಧ್ಯವಾಗುವುದಿಲ್ಲ, ದಯಾಮಾಡಿ ಎಲ್ಲರೂ ಶಾಂತ ರೀತಿಯಿಂದ ಇರುವಂತೆ ಮನವಿ ಮಾಡಿದರು.

» ನಾಲ್ಕನೇ ಪುಟದಲ್ಲಿ

# ನಾಳೆಉಚಿತ ನೇತ್ರ ತಪಾಸಣಾ ಶಿಬಿರ

• ಪ್ರಜೋದಯ ವರದಿ

**ಸಕಲೇಶಪುರ:** ಇಲ್ಲಿಯ ರೋಟರಿ ಸಂಸ್ಥೆ ಹಾಗೂ ಸುನಂದ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆ (ಹಾಸನ, ತಿಪಟೂರು) ಇವರ ಸಂಯುಕ್ತಾಶ್ರಯದಲ್ಲಿ ಏಪ್ರಿಲ್ 16ರ ಗುರುವಾರ ಉಚಿತ ನೇತ್ರ ತಪಾಸಣಾ ಶಿಬಿರ ಆಯೋಜಿಸಲಾಗಿದೆ.

ಅಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರವರೆಗೆ ಕ್ರಾಫರ್ಡ್ ಸರ್ಕಾರಿ ಆಸ್ಪತ್ರೆ ಮುಂಭಾಗದ ರೋಟರಿ ಕಮ್ಯೂನಿಟಿ ಹಾಲ್ ನಲ್ಲಿ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ 10ನೇ ತರಗತಿ ವರೆಗಿನ ಶಾಲಾ ಮಕ್ಕಳಿಗೆ ಅಗತ್ಯವಿದ್ದಲ್ಲಿ ಉಚಿತವಾಗಿ ಕನ್ನಡಕ ವಿತರಿಸಲಾಗುವುದು. ಸಾರ್ವಜನಿಕರಿಗೆ ರಿಯಾಯಿತಿ ದರದಲ್ಲಿ ಕನ್ನಡಕ ನೀಡಲಾಗುವುದು.

# ಜಿಲ್ಲಾಧಿಕಾರಿಯಿಂದ ಹಾಸ್ಟೆಲ್ ನಿರ್ವಹಣೆ ಪರಿಶೀಲನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಹಾಸ್ಟೆಲ್‌ಗಳ ನಿರ್ವಹಣೆ ಮತ್ತು ಮೂಲಭೂತ ಸೌಲಭ್ಯಗಳ ಬಗ್ಗೆ ಬರುತ್ತಿರುವ ದೂರುಗಳ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಂಗಳವಾರ ನಗರದ ಬಿ.ಸಿ.ಎಂ. ವಿದ್ಯಾರ್ಥಿ ನಿಲಯದ ಪರಿಶೀಲನೆ ನಡೆಸಿದರು.

ಹಾಸ್ಟೆಲ್‌ನಲ್ಲಿ ಇರುವ ವಸತಿ, ಆಹಾರ, ಸ್ವಚ್ಛತೆ ಸೇರಿ ವಿವಿಧ ವ್ಯವಸ್ಥೆಗಳ ಕುರಿತು ಸ್ಥಳದಲ್ಲಿಯೇ ಪರಿಶೀಲಿಸಿ, ಸಂಬಂಧಪಟ್ಟ ಅಧಿಕಾರಿಗಳಿಂದ ವಿವರ ಪಡೆದರು. ಈ ವೇಳೆ ವಿದ್ಯಾರ್ಥಿಗಳೊಂದಿಗೆ ನೇರವಾಗಿ ಮಾತುಕತೆ ನಡೆಸಿ, ಸಮಸ್ಯೆಗಳು ಹಾಗು ಅಗತ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಪರಿಶೀಲನೆಯ ಭಾಗವಾಗಿ, ವಿದ್ಯಾರ್ಥಿಗಳಿಗೆ ನೀಡ



ಲಾಗುತ್ತಿರುವ ಆಹಾರದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು, ಜಿಲ್ಲಾಧಿಕಾರಿ ವಿದ್ಯಾರ್ಥಿಗಳೊಂದಿಗೆ ಭೋಜನ ಸ್ವೀಕರಿಸಿದರು. ಈ ಸಂದರ್ಭದಲ್ಲಿ ಆಹಾರದ ಗುಣಮಟ್ಟ, ಪೋಷಕಾಂಶ, ಸ್ವಚ್ಛತೆ ಕುರಿತು ವಿಶೇಷ ಗಮನ ಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹಾಸ್ಟೆಲ್‌ಗಳ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ಸೌಲಭ್ಯ ಒದಗಿಸುವ ದಿಸೆಯಲ್ಲಿ ನಿರ್ಲಕ್ಷ್ಯ ಸಹಿಸಲಾಗುವುದಿಲ್ಲವೆಂದು ಎಚ್ಚರಿಸಿದ ಅವರು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಕ್ಷಣ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು. ಈ ಸಂದರ್ಭದಲ್ಲಿ ಬಿ.ಸಿ.ಎಂ. ಇಲಾಖೆ ಜಿಲ್ಲಾ ಅಧಿಕಾರಿ ಕುಮಾರ್ ಸೇರಿ ಅಧಿಕಾರಿಗಳು ಹಾಜರಿದ್ದರು.

## ಜಿಲ್ಲಾ ಪತ್ರಕರ್ತರ ಸಂಘದಲ್ಲಿ ವಿಭಿನ್ನವಾಗಿ ಆಚರಣೆ | ಪ್ರಶಸ್ತಿ ಪುರಸ್ಕೃತ ಕೆಪಿಎಸ್ ಪ್ರಮೋದ್‌ಗೆ ಅಭಿನಂದನೆ

# ಅಂಬೇಡ್ಕರ್ ಜಯಂತಿಯಲ್ಲಿ ಪೌರಕಾರ್ಮಿಕರಿಗೆ ಸನ್ಮಾನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಚಾರಣೆಯನ್ನು ನಗರದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳಾ ಪೌರಕಾರ್ಮಿಕರನ್ನು ಸನ್ಮಾನಿಸುವ ಮೂಲಕ ವಿಭಿನ್ನವಾಗಿ ಆಚರಿಸಲಾಯಿತು. ಇದೇ ವೇಳೆ ಉದ್ಯೋಗ್ ಯೋಗದಾನ್ ಪುರಸ್ಕಾರ್ ಪ್ರಶಸ್ತಿ ಪುರಸ್ಕೃತ ಅಮೋಘ್ ವಾಹಿನಿ ಮುಖ್ಯಸ್ಥ ಕೆ.ಪಿ.ಎಸ್.ಪ್ರಮೋದ್ ಅವರನ್ನು ಅಭಿನಂದಿಸಲಾಯಿತು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಅಂಬೇಡ್ಕರ್ ಜಯಂತಿ ಆಚರಣೆ ಜೊತೆಗೆ ಪೌರ ಕಾರ್ಮಿಕರನ್ನು ಸನ್ಮಾನ ಮಾಡುತ್ತಿರುವುದು ಸಂತಸ ನೀಡಿದೆ. ಯಾರ ಪ್ರಭಾವಕ್ಕೂ ಒಳಗಾಗದೇ ನಾವೇ ಮಹಾನಗರ ಪಾಲಿಕೆಯ ಮಹಿಳಾ ಪೌರ





ಕಾರ್ಮಿಕರಾದ ಮಂಜಮ್ಮ ಹಾಗು ಅಶ್ವಿನಿ ಅವರ ಸೇವೆಯನ್ನು ಗುರುತಿಸಿ ಸನ್ಮಾನ ಮಾಡಿದ್ದೇವೆ. ಮುಂದೆಯೂ ಹೀಗೆಯೇ ಕಾರ್ಯಕ್ರಮ ಮಾಡುವ ಆಸೆ ಇದೆ. ನನ್ನೊಂದಿಗೆ ಉತ್ತಮ ತಂಡ ಇರುವುದರಿಂದ ಒಳ್ಳೆಯ ಕೆಲಸ ಮಾಡಲು ಸಾಧ್ಯವಾಗಿದೆ ಎಂದರು.

ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜೆ.ಸುರೇಶ್ ಮಾತನಾಡಿ, ಅಂಬೇಡ್ಕರ್ ಅವರ ಮೂಲ ತತ್ವಗಳಾದ ಶಿಕ್ಷಣ, ಸಂಘಟನೆ, ಹೋರಾಟವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅಗತ್ಯವಾಗಿದೆ. ಉನ್ನತ, ಗುಣಮಟ್ಟದ ಶಿಕ್ಷಣ ಉಳ್ಳವರ ಪಾಲಾಗುತ್ತಿದೆ. ಹಳ್ಳಿಗಾಡಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಗಗನಕುಸುಮ ಎನ್ನುವಂತಾಗಿದೆ. ನಮ್ಮ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳಲು ಸಂಘಟಿತರಾಗಿ ಹೋರಾಟದ ಮೂಲಕ ಪಡೆದುಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು.

ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಆಕಾಶ್ ಸಿ.ಟಿ.ಕೇಬಲ್, ನಂತರ ಶ್ರೀರಾಮ ಸಿಟಿ ಕೇಬಲ್, 2006 ರಿಂದ ಅಮೋಘ ವಾಹಿನಿ ಬೆಳೆದು ಬಂದ ಹಾದಿ ವಿವರಿಸಿದರು. ಇಲ್ಲಿ ಕೆಲಸ ಮಾಡಿದ ಅನೇಕರು ವಿವಿಧ ಅದರಲ್ಲೂ ರಾಜ್ಯಮಟ್ಟದ ಸುದ್ದಿವಾಹಿನಿಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಪ್ರಮೋದ್ ಅವರು ಒಂದು ಒಳ್ಳೆಯ ತಂಡ ಕಟ್ಟಿ, ಅಮೋಘ್ ವಾಹಿನಿಯನ್ನು ವರ್ಣರಂಜಿತವಾಗಿ ಮಾಡಿದ್ದಾರೆ. ಇದೀಗ ಎಲ್ಲೆಡೆ ವಿಸ್ತರಣೆ ಮಾಡುವ ಪ್ರಯತ್ನದಲ್ಲಿದ್ದಾರೆ. ಮುಂದೆ ರಾಜ್ಯಮಟ್ಟದ ಸುದ್ದಿವಾಹಿನಿಯಾಗಿ ಬೆಳೆಯಲಿ ಎಂದು ಆಶಿಸಿದರು.

ಸಂಘದ ಮಾಜಿ ಅಧ್ಯಕ್ಷ ರವಿ ನಾಕಲಗೂಡು ಅವರು ಮಾತನಾಡಿ, ಇದೊಂದು ಅರ್ಥಪೂರ್ಣ ಆಚರಣೆ, ಪೌರ ಕಾರ್ಮಿಕರ ಅಭಿನಂದಿಸುವುದು ಉತ್ತಮ ಕಾರ್ಯ. ನಿರಂತರ ದಾಸೋಹದ ಮೂಲಕ ಹಾಸನ ಜಿಲ್ಲಾ ಪತ್ರಕರ್ತರ ಇಡೀ ರಾಜ್ಯಕ್ಕೆ ಮಾದರಿ ಆಗಿದೆ. ಈ ಬಗ್ಗೆ ಎಲ್ಲರೂ ಮಾತನಾಡುತ್ತಿದ್ದಾರೆ. ಅಧ್ಯಕ್ಷ ಯಾರೆಂಬುದು ಮುಖ್ಯ ಅಲ್ಲ, ಮಾಡುವ ಕೆಲಸ ಮುಖ್ಯ ಎಂದ ಅವರು, ಎಲ್ಲರಿಗೂ ಸಮಾನತೆ ಸಾರಿದ ಅಂಬೇಡ್ಕರ್ ಆದರ್ಶ ಎಲ್ಲರಿಗೂ ಮಾದರಿ ಎಂದರು.

ಮಾಜಿ ಅಧ್ಯಕ್ಷ ಬಿ.ಆರ್.ಉದಯ ಕುಮಾರ್ ಅವರು ಮಾತನಾಡಿ,

» ನಾಲ್ಕನೇ ಪುಟದಲ್ಲಿ

# ಇಂದು ಪತ್ರಕರ್ತರಿಗೆ ಆರೋಗ್ಯ ಶಿಬಿರ




• ಪ್ರಜೋದಯ ವರದಿ

**ಹಾಸನ:** ಮೈಸೂರಿನ ಕ್ಲಿಯರ್ ಮೆಡಿರೇಡಿಯಂಟ್ ಆಸ್ಪತ್ರೆ ವತಿಯಿಂದ ಬುಧವಾರ ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಕರ್ತರ ಕುಟುಂಬದವರಿಗಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9 ಗಂಟೆಗೆ ಶಿಬಿರ ಆರಂಭವಾಗಲಿದ್ದು, 10 ಮಂದಿ ವಿವಿಧ ನುರಿತ ತಜ್ಞವೈದ್ಯರು, ಜಿಬಿಆರ್‌ಎಸ್ (ಬ್ಲಡ್ ಶುಗರ್ ಟೆಸ್ಟ್), ಬ್ಲಡ್ ಪ್ರೆಶರ್ ಚೆಕಪ್, ಟೆಂಪರಚರ್ ಚೆಕಪ್, ಪಿಎಫ್‌ಟಿ (ಪಲ್ಮೊನರಿ ಫಂಕ್ಷನ್ ಟೆಸ್ಟ್) , ಬಿಎಂಡಿ(ಬೋನ್ ಮಿನೆರಲ್ ಡೆನ್ಸಿಟಿ ಟೆಸ್ಟ್) ಹಾಗು ಉಚಿತ ವೈದ್ಯಕೀಯ ಸಲಹೆ ಸೂಚನೆ ನೀಡಲಿದ್ದಾರೆ. ಇಸಿಜಿ, ಕ್ಯಾನ್ಸರ್ ಪತ್ತೆ ಸೇರಿ ಹಲವು ತಪಾಸಣೆಗಳು ನಡೆಯಲಿವೆ. ಡಾ|| ರಕ್ಷಿತ್ ಶೃಂಗೇರಿ, ಡಾ||ಸಂತೋಷ್ ಸೇರಿ ಹಲವು ವೈದ್ಯರು ವಿವಿಧ ಪರೀಕ್ಷೆ ಮಾಡಲಿದ್ದಾರೆಂದು ತಿಳಿಸಿದರು.

ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅವರು ಮಾತನಾಡಿ, ಸದಾ ಒತ್ತಡದಲ್ಲಿ ಕೆಲಸ ಮಾಡುವ ಪತ್ರಕರ್ತರು ಹಲವು ಸಮಸ್ಯೆಯನ್ನು ಎದುರಿಸುವುದನ್ನು ಗಮನಿಸಿದ್ದೇವೆ. ಜಿಲ್ಲೆಯ ಸಮಸ್ತ ಪತ್ರಕರ್ತ ಕುಟುಂಬ ಸದಸ್ಯರು, ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಆಸ್ಪತ್ರೆ ವೈದ್ಯ ಡಾ||ನಿತೀನ್, ಸುನೀಲ್, ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಜೆ.ಸುರೇಶ್, ಉಪಾಧ್ಯಕ್ಷ ಜಿ.ಪ್ರಕಾಶ್, ಖಜಾಂಚಿ ಪ್ರಕಾಶ್ ಬೆಳವಾಡಿ ಹಾಜರಿದ್ದರು.

CMYK CMYK CMYK CMYK

# ರೋಗ ನಿರೋಧಕ ಶಕ್ತಿ ಹೆಚ್ಚಿಸಬಲ್ಲ ಹುಣಸೆ ಹುಳಿ



ನಾನು ಸಣ್ಣವನಿದ್ದಾಗ ನನ್ನ ಅಜ್ಜಿ ಮನೆಯ ಹಿಂದುಗಡೆಯೇ ಹುಣಸೆ ಹುಳಿ ಅಥವಾ ಹಣ್ಣು ಮರ ಇತ್ತು. ಆಗ ಹುಣಸೆ ಹುಳಿ ಮಾತ್ರ ಇತ್ತು. ಅದು ಎಷ್ಟೇ ಹಣ್ಣಾದರೂ ಅದರ ರುಚಿ ಹುಳಿಯೇ ಆಗಿತ್ತು. ಆದರೆ ಈಗ ಹಾಗಲ್ಲ. ಸಿಹಿ ಹುಣಸೆ ಹಣ್ಣು ಮಾರುಕಟ್ಟೆಗೆ ಬರುತ್ತಿದೆ. ಹುಳಿಯ ಗುಣವೇ ಇಲ್ಲ. ಹುಣಸೆ ಹಣ್ಣಿಗೆ ಅಪವಾದ ಈ ಸಿಹಿ ಹುಣಸೆ ಎನ್ನಬಹುದೇನೋ? ಹುಣಸೆ ಕಾಯಿ ಇರುವಾಗ ಇಡೀ ಹುಣಸೆಯನ್ನು ತಿನ್ನುತ್ತಿದ್ದೆವು, ಅದು ಸ್ವಲ್ಪ ಬೆಳೆಯುವಾಗ ಸಿಪ್ಪೆ ತೆಗೆದು ತಿನ್ನುವುದು, ಕಾಯಿ ಹಣ್ಣಾಗಿ ಕೆಳಗೆ ಬೀಳುವ ಹುಣಸೆ ಹಣ್ಣನ್ನು ಚಪ್ಪರಿಸಿ ತಿನ್ನುತ್ತಿದ್ದೆವು. ಆದರೆ ಈಗಿನ ಮಕ್ಕಳು ಹುಣಸೆ ಹಣ್ಣನ್ನು ತಿಂದೇ ಇರಲಿಕ್ಕಿಲ್ಲ. ಹುಣಸೆ ಹಣ್ಣು ಬಹಳಷ್ಟು ರೋಗ ನಿರೋಧಕ ಹಾಗೂ ಆರೋಗ್ಯಕರ ಗುಣಗಳನ್ನು ಹೊಂದಿದೆ.

ಹುಣಸೆ ಹಣ್ಣು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದರಿಂದ ಹಿಡಿದು ಯಕೃತ್ತು ಮತ್ತು ಹೃದಯ ಕಾಯಿಲೆಗಳಿಂದ ಸುರಕ್ಷಿತವಾಗಿರಿಸುತ್ತದೆ. ಫೈಬರ್‌ನಿಂದ ಸಮೃದ್ಧವಾಗಿರುವ ಹುಣಸೆ ಹಣ್ಣು, ಕೊಬ್ಬನ್ನು ಹೊಂದಿರುವುದಿಲ್ಲ. ಆದ್ದರಿಂದ, ತಜ್ಞರ ಪ್ರಕಾರ, ಪ್ರತಿದಿನ ಹುಣಸೆಹಣ್ಣು ತಿನ್ನುವುದರಿಂದ ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೆಯೇ ಇದು ಫ್ಲೇವನಾಯ್ಡ್‌ಗಳು ಮತ್ತು ಪಾಲಿಫಿನಾಲ್‌ಗಳನ್ನು ಹೊಂದಿರುತ್ತದೆ.

ಹುಣಸೆಹಣ್ಣು ಪಾಲಿಫಿನಾಲ್‌ಗಳು ಮತ್ತು ಫ್ಲೇವನಾಯ್ಡ್‌ಗಳಿಂದ ಸಮೃದ್ಧವಾಗಿದೆ. ಇದು ಕೊಲೆಸ್ಟ್ರಾಲ್ ಮಟ್ಟವನ್ನು ಕಾಪಾಡಿಕೊಳ್ಳಲು ತುಂಬಾ ಪ್ರಯೋಜನಕಾರಿಯಾಗಿದೆ. ಹುಣಸೆ ಹಣ್ಣು ಕೆಟ್ಟ ಕೊಲೆಸ್ಟ್ರಾಲ್ ಅನ್ನು ಕಡಿಮೆ ಮಾಡುತ್ತದೆ ಮತ್ತು ಅದೇ ಸಮಯದಲ್ಲಿ ಉತ್ತಮ ಕೊಲೆಸ್ಟ್ರಾಲ್ ಅನ್ನು ಹೆಚ್ಚಿಸುತ್ತದೆ. ಇದು ರಕ್ತನಾಳಗಳಲ್ಲಿ ಕೊಬ್ಬು ಸಂಗ್ರಹವಾಗುವ ಅಪಾಯವನ್ನು ಕಡಿಮೆ ಮಾಡುತ್ತದೆ ಮತ್ತು ಡಯಾಸ್ಟೋಲಿಕ್ ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ.

ಹುಣಸೆಹಣ್ಣು ಉತ್ಕರ್ಷಣ ನಿರೋಧಕಗಳು, ಫ್ಲೇವನಾಯ್ಡ್‌ಗಳು ಮತ್ತು ವಿಟಮಿನ್ ಸಿ ಮತ್ತು ಎ ನಂತಹ ಖನಿಜಗಳ ಶಕ್ತಿ ಕೇಂದ್ರವಾಗಿದೆ. ಆದ್ದರಿಂದ ಇದು ನಿಮ್ಮ ದೇಹಕ್ಕೆ ತುಂಬಾ ಪ್ರಯೋಜನಕಾರಿಯಾಗಿದೆ. ಇದು ದೇಹದಲ್ಲಿ ಸ್ವತಂತ್ರ ರಾಡಿಕಲ್‌ಗಳ ರಚನೆಯನ್ನು ತಡೆಯುತ್ತದೆ. ಹುಣಸೆಹಣ್ಣು ಚರ್ಮವನ್ನು ತುಂಬಾ ಉತ್ತಮಗೊಳಿಸುತ್ತದೆ. ಹುಣಸೆ ಫೇಸ್ ಪ್ಯಾಕ್ ಉರಿಯೂತವನ್ನು ಕಡಿಮೆ ಮಾಡುತ್ತದೆ. ಚರ್ಮದ ಟೋನ್ ಅನ್ನು ಹಗುರಗೊಳಿಸಲು ಮತ್ತು ಕಪ್ಪು ಕಲೆಗಳು ಮತ್ತು ವರ್ಣದ್ರವ್ಯವನ್ನು ನೈಸರ್ಗಿಕವಾಗಿ ಕಡಿಮೆ ಮಾಡಲು ಇದು ಉತ್ತಮ ಘಟಕಾಂಶವಾಗಿದೆ. ಆದರೆ ವಿಭಿನ್ನ ವಸ್ತುಗಳು ಪ್ರತಿಯೊಬ್ಬ ಮನುಷ್ಯನ ಚರ್ಮಕ್ಕೆ ಸರಿಹೊಂದುವುದಿಲ್ಲ. ಆದ್ದರಿಂದ ನೀವು ಅದನ್ನು ಪ್ರಯತ್ನಿಸುವ ಮೊದಲು ವೈದ್ಯರನ್ನು ಸಂಪರ್ಕಿಸಬೇಕು.

ನಿಮ್ಮ ಕೂದಲು ನಿರಂತರವಾಗಿ ಉದುರುತ್ತಿದ್ದರೆ, ಬಿಳಿಯಾಗಿದ್ದರೆ ಹುಣಸೆಹಣ್ಣು ಅದಕ್ಕೆ ಮದ್ದಾಗಬಹುದು. ಹುಣಸೆಹಣ್ಣು ಕೂದಲಿನ ಸಮಸ್ಯೆಗಳನ್ನು ತೊಡೆದುಹಾಕಲು ಉತ್ತಮ ಮನೆಮದ್ದು. ಹುಣಸೆಹಣ್ಣಿನ ನಿಯಮಿತ ಸೇವನೆಯು ಕೂದಲನ್ನು ಬಲಪಡಿಸುತ್ತದೆ ಮತ್ತು ಕೂದಲು ಉದುರುವಿಕೆಯನ್ನು ನಿಲ್ಲಿಸುತ್ತದೆ. ಯಕೃತ್ತಿನ ಸಮಸ್ಯೆಗಳಿದ್ದರೆ, ನೀವು ಹುಣಸೆಹಣ್ಣು ಸೇವಿಸಬೇಕು ಏಕೆಂದರೆ ಇದು ನಿಮ್ಮ ಯಕೃತ್ತನ್ನು ಆರೋಗ್ಯಕರವಾಗಿಸಲು ಪೋಷಕಾಂಶಗಳನ್ನು ಹೊಂದಿರುತ್ತದೆ. ಕೊಬ್ಬಿನ ಯಕೃತ್ತಿನ ಕಾಯಿಲೆ ಅಥವಾ ಹೆಪಟೊಸ್ಟಿಯಾಟೋಸಿಸ್ ಅನ್ನು ತಪ್ಪಿಸಲು ಇದು ತುಂಬಾ ಒಳ್ಳೆಯದು. ತಜ್ಞರ ಪ್ರಕಾರ, ಹುಣಸೆ ಹಣ್ಣಿನ ಸಾರವು ನಿಮ್ಮ ಯಕೃತ್ತನ್ನು ರಕ್ಷಿಸುವ ಸಾಮರ್ಥ್ಯವನ್ನು ಹೊಂದಿದೆ. ಏಕೆಂದರೆ ಇದು ಪ್ರೊಸೈನಿಡಿನ್‌ಗಳು ಎಂಬ ಉತ್ಕರ್ಷಣ ನಿರೋಧಕಗಳನ್ನು ಹೊಂದಿರುತ್ತದೆ. ಇದು ಸ್ವತಂತ್ರ ರಾಡಿಕಲ್‌ಗಳಿಂದ ಯಕೃತ್ತಿಗೆ ಉಂಟಾಗುವ ಹಾನಿಯನ್ನು ಹೋರಾಡುತ್ತದೆ.

# ಅತ್ತ ದರಿ, ಇತ್ತ ಪುಲಿ ಹೊಸ ಬದುಕಿನ ರೀತಿ ಕಣ್ರೀ!

> ಮಕ್ಕಳಿಗೆ ಅವರು ಹೇಳಿಕೊಡುವ ಬದುಕಿನ ಪಾಠ ಕೂಡ ಹೇಗಿರುತ್ತದೆ ಎಂದರೆ ಅವರು ಯಾವ ಜಾಗದಲ್ಲಿ ಬದುಕಿನ ಓಟವನ್ನು ನಿಲ್ಲಿಸುತ್ತಾರೆ ಮಕ್ಕಳು ಅಲ್ಲಿಂದ ಮುಂದಕ್ಕೆ ಅದನ್ನು ಮುನ್ನಡೆಸುವಂತೆ ಹೇಳಿಕೊಡುತ್ತಾರೆ. ಇದರರ್ಥ ಮಕ್ಕಳು ತಮ್ಮ ಸ್ವಂತ ಇಚ್ಛೆಯಿಂದ ಬದುಕನ್ನು ಕಟ್ಟಿಕೊಳ್ಳಬಾರದು ಎಂದಲ್ಲ, ಹೆತ್ತವರು ಹಾಕಿದ ದಾರಿಯಲ್ಲಿ ಮಾತ್ರ ಸಾಗಬೇಕೂ ಎಂದಲ್ಲ.

ವಿಶ್ವರಂಗ ಬದುಕು ಮೂರು ದಶಕದ ಹಿಂದೆ ಇದ್ದಷ್ಟು ಸರಳವಾಗಿಲ್ಲ ಎನ್ನುವುದನ್ನು ಮೊದಲು ಅರಿತುಕೊಳ್ಳಬೇಕು. ಅವತ್ತಿಗೆ ಅವಕಾಶಗಳು ಕಡಿಮೆ ಇದ್ದವು ಎನ್ನುವುದನ್ನು ಒಪ್ಪೋಣ. ಆದರೆ ಅವತ್ತಿನ ದಿನದಲ್ಲಿ ತಪ್ಪಾದರೆ ಬದುಕು ಇನ್ನೊಂದು ಅವಕಾಶವನ್ನು ಕೊಡುತ್ತಿತ್ತು. ಇವತ್ತಿನ ವೇಗದ ಬದುಕಿನಲ್ಲಿ ತಪ್ಪು ಮಾಡಿದರೆ ಬದುಕು ಮುಕ್ತಾಯ!


ನಾವು ನಮ್ಮ ಮಕ್ಕಳಿಗೆ ಹೇಗಿರಬೇಕು? ಹೇಗೆ ಬದುಕಬೇಕು? ಎನ್ನುವುದರ ಬಗ್ಗೆ ಬಹಳಷ್ಟು ಕಲಿಸಿ ಕೊಡುವ ಪ್ರಯತ್ನ ಮಾಡುತ್ತೇವೆ. ಆದರೆ ಇಂದು ವಿಷಯ ಬಹಳ ಮುಖ್ಯವಾಗುತ್ತದೆ. ನಮಗೇನು ಗೊತ್ತು? ನಾವೇಗೆ ಬದುಕನ್ನು ಕಟ್ಟಿಕೊಂಡೆವು ಎನ್ನುವ ಆಧಾರದ ಮೇಲೆ ಮಾತ್ರ, ನಾವು ನಮ್ಮ ಮಕ್ಕಳಿಗೆ ಹೇಳುತ್ತಾ ಹೋಗುತ್ತೇವೆ. ಆದರೆ ನಾವು ಬದುಕು ಕಟ್ಟಿಕೊಂಡ ರೀತಿ ನಮಗೆ ಯಶಸ್ಸನ್ನು ತಂದು ಕೊಟ್ಟಿದ್ದೆಯೇ? ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳುವುದಿಲ್ಲ.

ಸಮಾಜದಲ್ಲಿನ 99 ಪ್ರತಿಶತ ಜನ ಬದುಕುವುದೇ ಹೀಗೆ! ಅವರು ವೇಳೆಯನ್ನು, ಹಣವನ್ನು ಎಂದಿಗೂ ಸರಿಯಾಗಿ ಲೆಕ್ಕ ಹಾಕಿ, ವಿಂಗಡಿಸಿ ಅಂದರೆ ಬಜೆಟ್ ಮಾಡಿ ಬದುಕುವ ಗೋಜಿಗೆ ಹೋಗುವುದಿಲ್ಲ. ಹೀಗಾಗೇ ಬದುಕು ಜಾಳುಜಾಳು. ಉಳಿದೊಂದು ಪ್ರತಿಶತ ಜನರು ಎಲ್ಲವನ್ನೂ ಸರಿಯಾಗಿ ಲೆಕ್ಕ ಹಾಕುತ್ತಾರೆ.

ಮಕ್ಕಳಿಗೆ ಅವರು ಹೇಳಿಕೊಡುವ ಬದುಕಿನ ಪಾಠ ಕೂಡ ಹೇಗಿರುತ್ತದೆ ಎಂದರೆ ಅವರು ಯಾವ ಜಾಗದಲ್ಲಿ ಬದುಕಿನ ಓಟವನ್ನು ನಿಲ್ಲಿಸುತ್ತಾರೆ ಮಕ್ಕಳು ಅಲ್ಲಿಂದ ಮುಂದಕ್ಕೆ ಅದನ್ನು ಮುನ್ನಡೆಸುವಂತೆ ಹೇಳಿಕೊಡುತ್ತಾರೆ. ಇದರರ್ಥ ಮಕ್ಕಳು ತಮ್ಮ ಸ್ವಂತ ಇಚ್ಛೆಯಿಂದ ಬದುಕನ್ನು ಕಟ್ಟಿಕೊಳ್ಳಬಾರದು ಎಂದಲ್ಲ, ಹೆತ್ತವರು ಹಾಕಿದ ದಾರಿಯಲ್ಲಿ ಮಾತ್ರ ಸಾಗಬೇಕೂ ಎಂದಲ್ಲ.

ಆದರೆ ಬದುಕಿನಲ್ಲಿ ಕಂಟಿನ್ಯೂಟಿ ಅದೆಷ್ಟು ಮುಖ್ಯವಾಗುತ್ತದೆ ಎನ್ನುವುದಕ್ಕೆ ಈ ಮಾತನ್ನು ಹೇಳಬೇಕಾಯ್ತು. ಮಕ್ಕಳು ಇಂದಿಗೆ ಪ್ಯಾಷನ್, ಮನಸ್ಸಿಗೆ ಇಷ್ಟವಾದದ್ದು ಮಾಡಬೇಕು ಎನ್ನುವ ಹುಚ್ಚಿಗೆ ಬಿದ್ದು ಬಿಟ್ಟಿವೆ, ಇವತ್ತಿನ ದಿನ ಎಲ್ಲರಿಗೂ ಯುಟ್ಯೂಬರ್ ಆಗಬೇಕು, ಕಂಟೆಂಟ್ ಕ್ರಿಯೇಟರ್ ಆಗಬೇಕು ಎನ್ನುವ ಹಂಬಲ ಶುರುವಾಗಿದೆ. ಯುಟ್ಯೂಬ್ ತೆರೆದು ವಿಡಿಯೋ ಹಾಕಲು ಶುರು ಮಾಡಿದರೆ ಸಾಕು ಹಣ, ಹೆಸರು ಮತ್ತು ಯಶಸ್ಸು ಪಕ್ಕಾ ಎನ್ನುವ ಮಟ್ಟಕ್ಕೆ ಮಕ್ಕಳು ಬದಲಾಗುತ್ತಿದ್ದಾರೆ!

ಇನ್ನಷ್ಟು ಮಕ್ಕಳದು ಇನ್ನೊಂದು ರೀತಿಯ ಗೋಳು. ಅವರಿಗೆ ತಾವು ಮಹಾಬುದ್ಧಿವಂತರು, ಶಾಲೆ, ಕಾಲೇಜಿನ ಓದು ನನಗಲ್ಲ ಎನ್ನುವ ಮನೋಭಾವ. ಬಿಸಿನೆಸ್ ಮಾಡಬೇಕು ಹಣ ಕೊಡು ಎಂದು ಪೋಷಕರನ್ನು ಪೀಡಿಸುತ್ತಾರೆ. ಒಂದಷ್ಟು ಪ್ರತಿಶತ ಮಕ್ಕಳು ಯುಟ್ಯೂಬ್ ವಿಡಿಯೋಗಳನ್ನು ನೋಡಿ ತಾವೇನೋ ಜ್ಞಾನಿಗಳು ಎನ್ನುವ ಅಹಂಭಾವ ಬೆಳಸಿಕೊಂಡು ಬಿಡುತ್ತಾರೆ.



ಶಾಲೆಗೆ ಕಟ್ಟುವ ಫೀಸು ನನಗೆ ಕೊಡು ಅದನ್ನು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಹಣ ಗಳಿಸುತ್ತೇನೆ ಎನ್ನುತ್ತಾರೆ. ಕಷ್ಟಪಟ್ಟು ಓದಿ ವಿಜ್ಞಾನಿ, ವೈದ್ಯ, ವಕೀಲ ಇತ್ಯಾದಿ ಆಗಬೇಕು ಎನ್ನುವುದು ಔಟ್ಡೇಟೆಡ್ ಎನ್ನಿಸಿಕೊಳ್ಳುತ್ತಿದೆ.

ಬದುಕು ಮೂರು ದಶಕದ ಹಿಂದೆ ಇದ್ದಷ್ಟು ಸರಳವಾಗಿಲ್ಲ ಎನ್ನುವುದನ್ನು ಮೊದಲು ಅರಿತುಕೊಳ್ಳಬೇಕು. ಅವತ್ತಿಗೆ ಅವಕಾಶಗಳು ಕಡಿಮೆ ಇದ್ದವು ಎನ್ನುವುದನ್ನು ಒಪ್ಪೋಣ. ಆದರೆ ಅವತ್ತಿನ ದಿನದಲ್ಲಿ ತಪ್ಪಾದರೆ ಬದುಕು ಇನ್ನೊಂದು ಅವಕಾಶವನ್ನು ಕೊಡುತ್ತಿತ್ತು. ಇವತ್ತಿನ ವೇಗದ ಬದುಕಿನಲ್ಲಿ ತಪ್ಪು ಮಾಡಿದರೆ ಬದುಕು ಮುಕ್ತಾಯ ಎನ್ನುವ ಮಟ್ಟಕ್ಕೆ ಬಂದು ನಿಂತಿದೆ.

ಸರಿಯಾದ ಸಮಯದಲ್ಲಿ ಸಿಕ್ಕ ಅವಕಾಶಗಳಿಗೆ ಬೆನ್ನು ತೋರಿಸಿದುರ ಫಲವಾಗಿ ಇಂದಿಗೆ ತಮ್ಮ ಹಿಂದಿನ ಬದುಕಿನ ಶೈಲಿ ಉಳಿಸಿಕೊಳ್ಳಲಾಗದೆ ಹೀನಾಯ ಬದುಕನ್ನು ಬದುಕುತ್ತಿರುವವರ ಸಂಖ್ಯೆ ಕೂಡ ಅಸಂಖ್ಯ. ಇವತ್ತಿಗೆ ಎಲ್ಲರಿಗೂ ರಾತ್ರಿ ಕಳೆದು ಬೆಳಗಾಗುವುದರಲ್ಲಿ ಫೇಮಸ್ ಆಗಿಬಿಡಬೇಕು ಎನ್ನುವ ಮನೋಭಾವ ಹೆಚ್ಚಾಗಿದೆ.


ಒಬ್ಬ ವ್ಯಕ್ತಿ ಸಮಾಜದಲ್ಲಿ ಆ ಮಟ್ಟದ ಯಶಸ್ಸು ಪಡೆದುಕೊಳ್ಳುವುದರ ಹಿಂದೆ ಅನೇಕ ವರ್ಷಗಳ ಕಸರತ್ತು, ಪರಿಶ್ರಮ ಇರುತ್ತದೆ ಎನ್ನುವುದನ್ನು ಮಾತ್ರ ಗಮನಿಸುವುದಿಲ್ಲ. ಹೀಗಾಗುವುದಕ್ಕೆ ಕೂಡ ಕಾರಣವಿದೆ. ಇವತ್ತು ಹೇಳಿಕೇಳಿ ಡಿಜಿಟಲ್ ಯುಗ ಅದ್ಯಾವುದೋ ಹಾಡನ್ನು ಬೇರೆ ರೀತಿ ತಿರುಚಿ ಹಾಡಿದರೂ ಸಾಕು ಬಕ ಪಕ್ಷಿಗಳಂತೆ ಕಾಯುತ್ತಿರುವ ಎಲ್ಲ ಯುಟ್ಯೂಬ್ ಚಾನಲ್‌ಗಳು ಕೂಡ ಅದನ್ನೇ ಮತ್ತೆ ಮತ್ತೆ ಹಾಕುತ್ತವೆ. ನೋಡುಗರಿಗೆ ಯಾವುದೇ ಹೆಚ್ಚು ಚಿಂತೆ ಮಾಡದೆ, ವಿವೇಚನೆ ಬಳಸದೆ ಕನ್ಸುಮ್ ಮಾಡಲು ಬೇಕಿರುವುದು ಕೂಡ ಇಂತಹ ಕಂಟೆಂಟುಗಳು!

ಹೀಗಾಗಿ ಇಂತವು ವೈರಲ್ ಆಗುತ್ತವೆ. ಆ ವಿಡಿಯೋದಲ್ಲಿದ್ದವರು ಏಕಾಏಕಿ ಹೆಚ್ಚಿನ ಶ್ರಮವಿಲ್ಲದೆ ಪ್ರಸಿದ್ಧರಾಗಿ ಬಿಡುತ್ತಾರೆ. ಈ ಜಗತ್ತಿಗೆ ಬೇಕಿರುವುದು ಅವತ್ತಿನ ಲೆಕ್ಕಾಚಾರ ಮಾತ್ರ. ಇಂತಹ ಪ್ರಸಿದ್ಧಿಗಳು ಆ ಕ್ಷಣಕ್ಕೆ ಸಂಬಂಧಿಸಿದ್ದು ಮಾತ್ರ.

ಮೈಸೂರಿನ ಯುವ ದಸರಾದಲ್ಲಿ ಡ್ಯಾನ್ಸ್ ಮಾಡಿ ಪ್ರಸಿದ್ಧಳಾದ ಹುಡುಗಿ ಇರಬಹುದು, ಹೂವಿನ ಬಾಣದಂತೆ ಹಾಡನ್ನು ಹಾಡಿದ ಹುಡುಗಿ ಇರಬಹುದು ಅಥವಾ ಕುಂಭಮೇಳದ ತುಂಬು ಕಣ್ಣಿನ ಹುಡುಗಿ ಇರಬಹುದು, ಅದೇ ಕುಂಭಮೇಳದ ಐಐಟಿ ಬಾಬಾ ಇರಬಹುದು, ಇವೆಲ್ಲವೂ, ಇವರೆಲ್ಲರೂ ಆ ಕ್ಷಣದ ಜನರ ಸ್ಪಂದನೆಗೆ ಸಿಕ್ಕವರು.

ನಿಜವಾದ ಟ್ಯಾಲೆಂಟ್ ಸದಾ ಹಸಿರಾಗಿರುತ್ತದೆ. ನಡೆಯುವ ಹಾದಿಯಲ್ಲಿ ಏರುಪೇರು ಸಹಜ. ಹಾಗೆ ನಿಜವಾದ ಟ್ಯಾಲೆಂಟ್ ಇದ್ದವರಿಗೂ ಸಂಕಷ್ಟ ಎದುರಾಗುತ್ತದೆ. ಆದರೆ ಅವೆಲ್ಲವೂ ಕ್ಷಣಿಕ. ಹೀಗೆ ಆ ಕ್ಷಣದ ಪ್ರಸಿದ್ಧಿಗೆ ಸಿಕ್ಕವರ ಬದುಕು ಇವತ್ತಿಗೆ ಏನಾಗಿದೆ ಎನ್ನುವುದನ್ನು ನಾವು ನೋಡಬೇಕು.

ಪಿಯುಸಿ ರಿಸಲ್ಟ್ ಬಂದಾಗಿದೆ. ಮಕ್ಕಳ ಮುಂದೆ, ಹೆತ್ತವರ ಮುಂದೆ ಪ್ರಶ್ನೆ ಕೂಡ ದೊಡ್ಡದಾಗಿ ಎದುರಾಗಿದೆ. ಮುಂದೇನು? ಯಾವ ಕೋರ್ಸ್ ಮಾಡಿದರೆ ಬೆಸ್ಟ್? ಎನ್ನುವುದು ಆ ಪ್ರಶ್ನೆ. ಇವತ್ತಿನ ಗದ್ದಲದಲ್ಲಿ ಯಾವುದು ಸರಿ? ಯಾವುದು ತಪ್ಪು? ಎನ್ನುವುದನ್ನು ಬೇರ್ಪಡಿಸುವುದೇ ದೊಡ್ಡ ಸವಾಲಾಗಿದೆ. ಇವತ್ತಿನ ಮಕ್ಕಳಿಗೆ ಇರುವ ಜ್ಞಾನ ಅನುಭವ ಬಂದದ್ದು ವಿಡಿಯೋಗಳ ಮೂಲಕ. ಅದು ಅವರು ಗಳಿಸಿಕೊಂಡದ್ದಲ್ಲ. ಎಲ್ಲ ಅನುಭವವನ್ನೂ ನಾವೇ ಗಳಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಒಪ್ಪುವ ಮಾತೆ ಆದರೂ, ಅವರು ವೀಕ್ಷಿಸಿದ ವಿಡಿಯೋದಲ್ಲಿನ ಸತ್ಯಾಸತ್ಯತೆವನ್ನು ಅರಿತುಕೊಳ್ಳುವ ಕ್ಷಮತೆ ಕೂಡ ಅವರಿಗಿರುವುದಿಲ್ಲ ಎನ್ನುವುದನ್ನು ಮರೆಯಬಾರದು.



ವಿದ್ಯಾವಂತ ಪೋಷಕರ ವಿಚಾರದಲ್ಲಿ ಒಂದಷ್ಟು ಮಾತು ಕತೆಯ ನಂತರ ಮಕ್ಕಳನ್ನು ಹೇಗೋ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾರೆ. ಪೋಷಕರಿಗೆ ಹೆಚ್ಚಿನ ತಿಳಿವಳಿಕೆ ಇಲ್ಲದ ಮನೆಗಳಲ್ಲಿ ಮಕ್ಕಳು ಹೇಳಿದ್ದು ನಿಜವೆಂದು ನಂಬುತ್ತಾರೆ. ಮಕ್ಕಳು ಹೇಳಿದ್ದಕ್ಕೆಲ್ಲ ಸರಿಯೆಂದು ತಲೆ ಅಡಿಸುತ್ತಾರೆ. ಕೋಟಿ ಕೋಟಿ ಬೆಲೆ ಬಾಳುವ ಆಸ್ತಿಯನ್ನು ಮಾರಿ ಮಗನ–ಮಗಳ ಕನಸಿಗೆ ನೀರೆರೆಯುತ್ತಾರೆ.

ಗೆಲುವಿನ ಪ್ರತಿಶತ ಒಂದು ಪ್ರತಿಶತಕ್ಕಿಂತ ಬಹಳ ಕಡಿಮೆ ಎನ್ನುವುದು ಅವರಿಗೆ ಗೊತ್ತಿರುವುದಿಲ್ಲ. ಬಿಸಿನೆಸ್ ಮಾಡುತ್ತೇನೆ ಹಣ ನೀಡಿ, ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತೇನೆ ಹಣ ನೀಡಿ, ಕಾಲೇಜಿಗೆ ಕಟ್ಟುವ ಹಣವನ್ನು ನನಗೆ ಕೊಡಿ, ಅದರಲ್ಲಿ ವಿಡಿಯೋ ಮಾಡಲು ಬೇಕಾಗುವ ಕ್ಯಾಮರಾ ಸಹಿತ ಎಲ್ಲ ಪರಿಕರಗಳನ್ನು ಕೊಳ್ಳುತ್ತೇನೆ, ಇಂತಹ ವಿಚಿತ್ರ ಬೇಡಿಕೆಗಳು ಹೆತ್ತವರು ಮಕ್ಕಳಿಂದ ಪಡೆದುಕೊಳ್ಳುತ್ತಿದ್ದಾರೆ.

ಇದು ಹೇಳಿಕೇಳಿ ಫಲಿತಾಂಶದ ಸಮಯ. ಈ ಸನ್ನಿವೇಶಗಳು ಇನ್ನಷ್ಟು ಹೆಚ್ಚಾಗುತ್ತವೆ. ಪೋಷಕರಾಗಿ ಇಲ್ಲ ಎನ್ನುವುದನ್ನು ನಮ್ಮ ಭಾರತೀಯ ಮಧ್ಯಮವರ್ಗದ ಪೋಷಕರು ಕಲಿಯಬೇಕಿದೆ. ಯಾವುದೇ ವಿಚಾರ ಆಗಲಿ ಅನುಭವವಿಲ್ಲದೆ ಹಣವನ್ನು ಹೂಡಿಕೆ ಮಾಡಲು ಸಾಧ್ಯವಿಲ್ಲ ಎನ್ನುವುದನ್ನು ಸ್ಪಷ್ಟವಾಗಿಸಬೇಕು.

ಏನು ಮಾಡಬೇಕು ಎಂದು ನಿರ್ಧರಿಸಿದ್ದೀಯಾ ಅದನ್ನು ಒಂದೆರೆಡು ವರ್ಷ ಮಾಡಿ ಅನುಭವ ಗಳಿಸಿಕೊಂಡು ನಂತರ ಅದರ ಸಾಧಕ–ಬಾಧಕಗಳನ್ನು ಅರಿತುಕೊಂಡು ಹೇಳು, ಆಮೇಲೆ ನೋಡೋಣ ಎನ್ನಬೇಕು. ಮಕ್ಕಳು ಹೇಳಿದಂತೆ ಕುಣಿಯುತ್ತ ಹೋದರೆ ಅವರಿಗೆ ಭವಿಷ್ಯವಿರುವುದಿಲ್ಲ ಎನ್ನುವುದನ್ನು ಪೋಷಕರು ಅರಿತು ಕೊಳ್ಳಬೇಕು.

ಇನ್‌ಫ್ಯಾಕ್ಟ್ ಅವರು ಹೇಳಿದ್ದಕ್ಕೆಲ್ಲ ಯಸ್ ಎನ್ನುವುದು ನೀವು ಅವರ ಅಭ್ಯುದಯಕ್ಕೆ ಅಡ್ಡಗಾಲು ಹಾಕಿದಂತೆ ಎನ್ನುವುದನ್ನು ಕೂಡ ಪೋಷಕರು ಅರಿತುಕೊಂಡರೆ ಒಳ್ಳೆಯದು. ವ್ಯಾಪಾರಿಯೊಬ್ಬರಿಗೆ ನಾಲ್ಕು ಜನ ಮಕ್ಕಳು. ಎರಡು ಮೂರು ವರ್ಷಗಳ ಅಂತರದಲ್ಲಿ ಜನಿಸಿದವರು.

ವ್ಯಾಪಾರಿಗೆ ಮಕ್ಕಳು ತನ್ನ ವ್ಯಾಪಾರವನ್ನು ಮುಂದುವರಿಸಲಿ ಎನ್ನುವ ಹಂಬಲ. ಮಕ್ಕಳು ಬೆಳೆಯುತ್ತಾ ಬಂದಂತೆ ನನ್ನ ವ್ಯಾಪಾರವನ್ನು ಮುಂದುವರಿಸದಿದ್ದರೂ ಪರವಾಗಿಲ್ಲ, ಯಾವ ಕೆಲಸ ಮಾಡಿದರೂ ಅದರಲ್ಲಿ ಉನ್ನತಿಗೇರಲಿ. ಒಂದೊಳ್ಳೆ ಬದುಕು ಕಟ್ಟಿಕೊಳ್ಳಲಿ ಎನ್ನುವ ಮನೋಭಾವವನ್ನು ಬೆಳಸಿಕೊಳ್ಳುತ್ತಾರೆ. ಮೊದಲ ಮಗ ಹಂದಿನೆಂಟು ತುಂಬಿದ ತಕ್ಷಣ ವ್ಯಾಪಾರ ಮಾಡುವುದಾಗಿ ವ್ಯಾಪಾರಿಯ ಬಳಿ ಹೇಳುತ್ತಾನೆ.

ವ್ಯಾಪಾರಿ ಬಹಳ ಖುಷಿಯಿಂದ ಯಾವ ವ್ಯಾಪಾರ ಮಾಡಬೇಕೆಂದು ನಿರ್ಧರಿಸಿದ್ದೀಯಾ? ಎಂದು ಕೇಳುತ್ತಾರೆ. ಪಿಜ್ಜಾ ಮಳಿಗೆಯನ್ನು ತೆರೆಯಬೇಕು ಎಂದಿದ್ದೇನೆ ಎನ್ನುವ ಮಾತನ್ನು ಮಗ ಹೇಳುತ್ತಾನೆ. ಪಿಜ್ಜಾ ವ್ಯಾಪಾರದ ಬಗ್ಗೆ ಒಂದಷ್ಟು ವಿಚಾರಗಳನ್ನು ಹೇಳು ಎನ್ನುವ ಅಪ್ಪನ ಮಾತಿಗೆ ಮಗನಲ್ಲಿ ಬೇಸರ ಉಂಟಾಗುತ್ತದೆ. ಸಾಲದ ರೂಪದಲ್ಲಿ ನನಗೆ ಹತ್ತು ಲಕ್ಷ ರೂಪಾಯಿ ನೀಡಿದರೆ ಅದಕ್ಕೆ ಬಡ್ಡಿಯನ್ನು ನೀಡುತ್ತಾ ವ್ಯಾಪಾರವನ್ನು ಕಟ್ಟಿ ಬೆಳೆಸುತ್ತೇನೆ ಎನ್ನುವ ಮಗನ ಮಾತಿಗೆ ಇಲ್ಲವೆನ್ನಲಾಗದೆ ವ್ಯಾಪಾರಿ ಹಣವನ್ನು ನೀಡುತ್ತಾರೆ.

ವ್ಯಾಪಾರಿಯ ಮಗ ತುಂಬಾ ಒಳ್ಳೆಯವನು. ಕಷ್ಟಜೀವಿ. ನಗರದ ಹೃದಯ ಭಾಗದಲ್ಲಿ ಪಿಜ್ಜಾ ಅಂಗಡಿ ತೆರೆಯುತ್ತಾನೆ. ಪಿಜ್ಜಾ ಮಾಡುವವರನ್ನು ನೇಮಿಸಿಕೊಳ್ಳುತ್ತಾನೆ. ಬೆಳಗಿನಿಂದ ರಾತ್ರಿಯವರೆಗೂ ದಿನದಲ್ಲಿ ಹದಿನಾಲ್ಕು ಗಂಟೆ ದುಡಿಯುತ್ತಾನೆ. ದೈವ ಕೃಪೆಯಿಂದ ಮೊದಲ ತಿಂಗಳ ಒಳ್ಳೆಯ ವ್ಯಾಪಾರ ಕೂಡ ಆಗುತ್ತದೆ. ಮೊದಲ ತಿಂಗಳಿಗೆ ಇಷ್ಟೊಂದು ವ್ಯಾಪಾರವಾಗಿದೆ ಎನ್ನುವುದು ಎಲ್ಲರಿಗೂ ಅಚ್ಚರಿಯಾಗುತ್ತದೆ. ಆದರೆ ಲೆಕ್ಕಾಚಾರಕ್ಕೆ ಕುಳಿತಾಗ, ಸಂಬಳ, ಬಾಡಿಗೆ, ಪದಾರ್ಥಗಳ ವೆಚ್ಚ , ಬಡ್ಡಿ ಎಲ್ಲವನ್ನೂ ತೆಗೆದ ಮೇಲೆ ಕೈಯಲ್ಲಿ ಉಳಿದದ್ದು ಮುಖದಲ್ಲಿ ನಗು ಉಳಿಸುವುದಿಲ್ಲ.

ಇಷ್ಟೆ ಮಾಡಿದ್ದು ಈ ಹಣಕ್ಕಾಗಿಯೇ? ಎನ್ನುವ ಪ್ರಶ್ನೆ ಆತನಲ್ಲಿ ಮೂಡುತ್ತದೆ. ಆದರೂ ವ್ಯಾಪಾರ ಮುಂದುವರಿಸುತ್ತಾನೆ. ಐದಾರು ತಿಂಗಳು ಕಳೆದರೂ ಹೆಚ್ಚಿನ ಬದಲಾವಣೆ ಕಾಣುವುದಿಲ್ಲ. ವ್ಯಾಪಾರ ಹೆಚ್ಚಾದಂತೆ ಖರ್ಚು ಕೂಡ ಹೆಚ್ಚಾಗುತ್ತಿತ್ತು. ಕೈಯಲ್ಲಿ ಉಳಿಯುತ್ತಿದ್ದ ಲಾಭಾಂಶ ಮಾತ್ರ ಹಾಕುತ್ತಿದ್ದ ಶ್ರಮಕ್ಕೆ ತಕ್ಕನಾಗಿರಲಿಲ್ಲ. ಇದರರ್ಥ ಸರಳ. ಕೇವಲ ಹಾರ್ಡ್ ವರ್ಕ್ ಕೆಲಸಕ್ಕೆ ಬರುವುದಿಲ್ಲ.

ಸಿದ್ಧತೆ, ಒಂದಷ್ಟು ಅನುಭವದ ಜತೆಗೆ ವ್ಯಾಪಾರಕ್ಕೆ ಇಳಿದಿದ್ದರೆ ಆಗ ಫಲಿತಾಂಶ ಬೇರೆಯದಿರುತ್ತಿತ್ತು. ಇದೊಂದು ಕಥೆಯಂತೆ ಕಾಣಿಸುತ್ತದೆ. ಆದರೆ, ಇಂತಹ ಕಥೆಯನ್ನು ಒಂದಲ್ಲ, ಎರಡಲ್ಲ, ನೂರಾರು ಕಂಡ ಅನುಭವದಿಂದ ಇದನ್ನು ಬರೆದಿದ್ದೇನೆ.

ಜೋಷ್‌ನಲ್ಲಿ ಕೆಲಸ, ವ್ಯಾಪಾರ ಇತ್ಯಾದಿ ಶುರು ಮಾಡಿಬಿಡಬಹುದು. ಆದರೆ ಎಷ್ಟು ಕಾಲ ನಾವು ಆ ಜೋಷ್ ಉಳಿಸಿಕೊಳ್ಳಬಹುದು? ಎಲ್ಲಿಯವರೆಗೆ ನಮ್ಮ ಜೇಬು ಭದ್ರವಾಗಿರುತ್ತದೆ? ಎಷ್ಟು ರಿಸ್ಕ್ ನಾವು ತೆಗೆದುಕೊಳ್ಳಬಹುದು? ನಾವು ಮಾಡಲಿಚ್ಛಿಸಿರುವ ವ್ಯಾಪಾರದಲ್ಲಿರುವ ಇತರರ ಪರಿಸ್ಥಿತಿಯೇನು? ಎನ್ನುವುದನ್ನು ತಿಳಿದುಕೊಳ್ಳಬೇಕು.

ಒಂದಷ್ಟು ವರ್ಷ ಇಚ್ಚಿಸಿದ ವ್ಯಾಪಾರ ಶುರು ಮಾಡುವ ಮುನ್ನ ಕೆಲಸ ಮಾಡಿ ಅನುಭವ ಪಡೆದು ಕೊಳ್ಳಬೇಕು. ವರ್ಷದಿಂದ ವರ್ಷಕ್ಕೆ ಬದುಕು ಇನ್ನಷ್ಟು ಸಂಕ್ಲಿಷ್ಟವಾಗುತ್ತಾ ಹೋಗುತ್ತಿದೆ. ಮಕ್ಕಳಿಗೆ ಮಾಹಿತಿ ಬಹಳಷ್ಟು ಸಿಗುತ್ತಿದೆ. ಅದರ ಆಧಾರದ ಮೇಲೆ ಮಹತ್ತರ ಸಾಧಿಸಿ ಬಿಡಬೇಕು ಎನ್ನುವ ಹಂಬಲ ಅವರಲ್ಲಿ ಚಿಗುರುತ್ತದೆ. ಅದಕ್ಕೆ ಹಣ ಅಥವಾ ಮಾನಸಿಕ ಬೆಂಬಲ ಮನೆಯಲ್ಲಿ ಸಿಗದೆ ಹೋದರೆ ಹೆತ್ತವರನ್ನೇ ಶತ್ರುಗಳಂತೆ ನೋಡುವ ಪರಿಪಾಟು ಹೆಚ್ಚಾಗುತ್ತಿದೆ.

ಇವುಗಳ ನಡುವೆ ಆನ್ಲೈನ್ ಗೇಮಿಂಗ್, ಬೆಟ್ಟಿಂಗ್ ಭೂತಗಳು ಕೂಡ ಯುವಜನತೆಯನ್ನು ಕಾಡುತ್ತಿದೆ. ಕೇಳಿದ ಹಣ ಕೊಡಲಿಲ್ಲ ಎನ್ನುವ ಏಕೈಕ ಕಾರಣಕ್ಕೆ ಹೆತ್ತವರನ್ನು ಕೊಲ್ಲುವ ಮಟ್ಟಕ್ಕೆ ಮಕ್ಕಳು ಬದಲಾಗುತ್ತಿದ್ದಾರೆ. ಇಂತಹ ಮನಸ್ಥಿತಿ ಒಂದು ದಿನದಲ್ಲಿ ಉಂಟಾಗುವುದಿಲ್ಲ. ಮಕ್ಕಳೊಂದಿಗೆ ನಿತ್ಯ ಸಂವಹನ ನಡೆಸುತ್ತಿದ್ದರೆ ಅವರಗುತ್ತಿರುವ ಬದಲಾವಣೆಯನ್ನು ಗಮನಿಸಬಹುದು. ಆದರೆ ಮನೆಯಲ್ಲಿ ಹೆಣ್ಣುಗಂಡು ಇಬ್ಬರೂ ದುಡಿಯದಿದ್ದರೆ ಬದುಕಿನ ಬಂಡಿ ಸಾಗುವುದಿಲ್ಲ ಎನ್ನುವ ಈ ಕಾಲಘಟ್ಟದಲ್ಲಿ ಮಕ್ಕಳೊಂದಿಗೆ ಮಾತಾಡುವ ವ್ಯವಧಾನ ಹೆತ್ತವರಿಗೆಲ್ಲಿದೆ? ಬದಲಾಗುತ್ತಿರುವ ಸಮಯ, ಬದುಕಿನ ರೀತಿ ಉತ್ತರಕ್ಕಾಗಿ ಪರದಾಡುವಂತೆ ಮಾಡುತ್ತಿದೆ. ಇನ್ನೂ ಎಚ್ಚೆತ್ತುಕೊಳ್ಳದಿದ್ದರೆ ಉತ್ತರಗಳಿಲ್ಲದ ಪ್ರಶ್ನೆಗಳು ಸಿದ್ಧವಾಗುತ್ತವೆ. ಎಚ್ಚರ !

**– ರಂಗಸ್ವಾಮಿ ಎಂ**

# ವೀಳ್ಯದೆಲೆ – ಆಶ್ಚರ್ಯಕರ ಆರೋಗ್ಯ ಪ್ರಯೋಜನಗಳು

ಜನರು ಊಟದ ನಂತರ ಪಾನ್ ತಿನ್ನಲು ಇಷ್ಟಪಡುತ್ತಾರೆ. ಇದು ಆಹಾರವನ್ನು ಜೀರ್ಣಿಸಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಹೇಳಲಾಗುತ್ತದೆ. ಆದರೆ, ವೀಳ್ಯದೆಲೆಯನ್ನು ನೀರಿನಲ್ಲಿ ಕುದಿಸಿ ಕುಡಿಯುವುದರಿಂದ ಹಲವಾರು ಆರೋಗ್ಯ ಲಾಭಗಳು ದೊರೆಯುತ್ತವೆ ಎನ್ನುತ್ತಾರೆ ಆರೋಗ್ಯ ತಜ್ಞರು. ನೆಗಡಿ ಮತ್ತು ಕೆಮ್ಮಿಗೆ ವೀಳ್ಯದೆಲೆಯ ನೀರು ಒಳ್ಳೆಯದು. ಇದು ಕಫ ಮತ್ತು ಪಿತ್ತ ದೋಷಗಳನ್ನು ನಿವಾರಿಸುತ್ತದೆ. ಹಾಗೆಯೇ ವೀಳ್ಯದೆಲೆಯ ನೀರು ಹಲವಾರು ಪ್ರಯೋಜನಗಳನ್ನು ನೀಡುತ್ತದೆ. ಆ ಪ್ರಯೋಜನಗಳೇನು ಎಂದು ತಿಳಿಯಿರಿ.

1) ವೀಳ್ಯದೆಲೆಯ ನೀರು ಮಾಡುವ ವಿಧಾನ: 3–4 ವೀಳ್ಯದೆಲೆಗಳನ್ನು ತೊಳೆದು ಮೂರು ಲೋಟ ನೀರಿನಲ್ಲಿ ಚೆನ್ನಾಗಿ ಕುದಿಸಿ ಮತ್ತು ಒಂದು ಲೋಟ ಉಳಿದಾಗ, ಅದು ತಣ್ಣಗಾದ ನಂತರ ದಿನಕ್ಕೆ ಎರಡರಿಂದ ಮೂರು ಬಾರಿ ಕುಡಿಯಿರಿ. ಇದು ನಿಮಗೆ ತುಂಬಾ ಪ್ರಯೋಜನ ಕಾರಿ ಎಂದು ಆಯುರ್ವೇದ ತಜ್ಞರು ಹೇಳುತ್ತಾರೆ.

2) ಮಧುಮೇಹವನ್ನು ನಿಯಂತ್ರಿಸುತ್ತದೆ: ವೀಳ್ಯದೆಲೆಯ ನೀರು ಮಧುಮೇಹಿಗಳ ದೇಹದಲ್ಲಿನ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಹಾಗಾಗಿ ಮಧುಮೇಹಿಗಳು ಈ ನೀರನ್ನು ಕುಡಿಯಬಹುದು.

3) ಮಲಬದ್ಧತೆಯಿಂದ ಪರಿಹಾರ ನೀಡುತ್ತದೆ: ಇತ್ತೀಚಿನ ದಿನಗಳಲ್ಲಿ ಅನೇಕ ಜನರು ಮಲಬದ್ಧತೆಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ವೀಳ್ಯದೆಲೆಯ ನೀರನ್ನು ಕುಡಿಯುವುದು ಮಲಬದ್ಧತೆಗೆ ತುಂಬಾ ಪ್ರಯೋಜನಕಾರಿ.

4) ಕಫ –ಪಿತ್ತ ತೆರವುಗೊಳಿಸುತ್ತದೆ: ಉರಿಯೂತದ ಮತ್ತು ಆಂಟಿಫಂಗಲ್ ಗುಣಲಕ್ಷಣಗಳಿಂದ ಸಮೃದ್ಧವಾಗಿದೆ, ವೀಳ್ಯದೆಲೆ ನೀರು ಕೆಮ್ಮು ಮತ್ತು ಪಿತ್ತ ದೋಷಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಇದು ಗಂಟಲಿನ ಊತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಎದೆಯಲ್ಲಿ ಸಂಗ್ರಹವಾಗಿರುವ ಕಫವನ್ನು ತೆಗೆದು ಹಾಕುತ್ತದೆ.

5) ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ: ವಾಂತಿ, ಭೇದಿ, ವಾಕರಿಕೆ ಮುಂತಾದ ಸಮಸ್ಯೆಗಳಿದ್ದರೆ ವೀಳ್ಯದೆಲೆಯ ನೀರು ಸಹ ಪ್ರಯೋಜನಕಾರಿಯಾಗಿದೆ. ಈ ನೀರು ನಮ್ಮ ಜೀರ್ಣ ಶಕ್ತಿಯನ್ನು ಸಮತೋಲನದಲ್ಲಿಡಲು ಸಹಾಯ ಮಾಡುತ್ತದೆ. ಇದು ನಮ್ಮ ಜೀರ್ಣಶಕ್ತಿಯನ್ನು ಸಹ ಆರೋಗ್ಯಕರವಾಗಿರಿಸುತ್ತದೆ.

6) ಬಾಯಿಯ ದುರ್ವಾಸನೆ ಹೋಗಲಾಡಿಸುತ್ತದೆ:



ವೀಳ್ಯದೆಲೆಯಿಂದ ತಯಾರಿಸಿದ ನೀರು ಬಾಯಿಯ ದುರ್ವಾಸನೆ ಹೋಗಲಾಡಿಸುತ್ತದೆ. ಇದಲ್ಲದೆ, ಇದು ಹಲ್ಲುಗಳನ್ನು ಹೊಳಪು ಮಾಡಲು ಸಹಾಯ ಮಾಡುತ್ತದೆ.

7) ವೀಳ್ಯದೆಲೆಯು ಪ್ರಬಲವಾದ ಕ್ಯಾನ್ಸರ್ ವಿರೋಧಿ ಮತ್ತು ಆಂಟಿಮ್ಯುಟಾಜೆನಿಕ್ ಸಂಯುಕ್ತಗಳನ್ನು ಹೊಂದಿದೆ ಮತ್ತು ಕ್ಯಾನ್ಸರ್ ಬೆಳವಣಿಗೆಯ ಅಪಾಯವನ್ನು ಕಡಿಮೆ ಮಾಡುತ್ತದೆ. ಇದು ಸೂಕ್ಷ್ಮಜೀವಿಯ ವಿರೋಧಿ ಗುಣಗಳನ್ನು ಹೊಂದಿದ್ದು ಸಣ್ಣ ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರಗಳ ಸೋಂಕಿನಿಂದ ನಿಮ್ಮನ್ನು ರಕ್ಷಿಸುತ್ತದೆ. ಇದು ಗಾಯಗಳನ್ನು ಗುಣಪಡಿಸಲು ಸಹಾಯ ಮಾಡುತ್ತದೆ, ವಿಶೇಷವಾಗಿ ಸುಟ್ಟ ಗಾಯಗಳು. ವೀಳ್ಯದೆಲೆಯು ಖಿನ್ನತೆಯನ್ನು ಎದುರಿಸಲು ಹೆಸರುವಾಸಿಯಾಗಿದೆ ಮತ್ತು ನಿಮ್ಮನ್ನು ಹಗುರವಾದ, ಸಂತೋಷದ ಮನಸ್ಥಿತಿಯಲ್ಲಿ ಇರಿಸಬಹುದು.

8) ವೀಳ್ಯದೆಲೆಯು ಪೋಷಕಾಂಶಗಳಿಂದ ತುಂಬಿರುತ್ತದೆ ಮತ್ತು ಇದು ನಿಮಗೆ ತುಂಬಾ ಒಳ್ಳೆಯದು. ಇದು ಯೋಗ್ಯ ಪ್ರಮಾಣದ ಅಗತ್ಯ ಪೋಷಕಾಂಶಗಳನ್ನು ಒಳಗೊಂಡಿದೆ. 100 ಗ್ರಾಂಗೆ ವೀಳ್ಯದೆಲೆಯ ಪೌಷ್ಟಿಕಾಂಶದ ಅಂಶವನ್ನು ಪರಿಶೀಲಿಸೋಣ, 1.3 ಮೈಕ್ರೋಗ್ರಾಂ ಅಯೋಡಿನ್, 1.1–4.6 ಮೈಕ್ರೋಗ್ರಾಂ ಪೊಟ್ಯಾಸಿಯಮ್, 1.9–2.9 ಮೈಕ್ರೋಗ್ರಾಂ ವಿಟಮಿನ್ ಎ, 13–0 ಮೈಕ್ರೋಗ್ರಾಂ ವಿಟಮಿನ್ ಬಿ–1, 1.9–30 ಮೈಕ್ರೋಗ್ರಾಂ ವಿಟಮಿನ್ –2, ಮತ್ತು ನಿಕೋಟಿನಿಕ್ ಆಮ್ಲದ 0.63–0.89 ಮೈಕ್ರೋಗ್ರಾಂಗಳು. ಬೀಟಲ್ ಎಲೆಗಳಲ್ಲಿ ಇರುವ ಈ ಪೋಷಕಾಂಶಗಳು ನಿಮ್ಮ ಆರೋಗ್ಯಕ್ಕೆ ಒಳ್ಳೆಯದು.

# ಸ್ವಾಸ್ಥ್ಯ ಇಲ್ಲದ ವಿಶ್ವಸಂಸ್ಥೆ ಜೀವಂತ ಇದೆಯೇ?

> ವಿಶ್ವಸಂಸ್ಥೆ ಎಂಬುದು 1945ರ ಅ.24ರಂದು ರೂಪುಗೊಂಡ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ. 1939 ರಿಂದ 1945ರವರೆಗೆ ಆರು ವರ್ಷಗಳ ಕಾಲ ವಿಶ್ವದ ಎರಡು ಬಣಗಳ ನಡುವೆ ಎರಡನೇ ಮಹಾಯುದ್ಧ ನಡೆಯಿತು. ಒಟ್ಟು 70 ದೇಶಗಳ ಸೈನ್ಯವು ಭಾಗವಹಿಸಿದವು. ಆರು ಕೋಟಿಗೂ ಹೆಚ್ಚು ಜನರು ಪ್ರಾಣ ಕಳೆದುಕೊಂಡರು. ಇಂದು ಕಂಪ್ಯೂಟರ್, ತಂತ್ರಾಂಶ, ರೇಡಾರ್, ಸ್ಯಾಟಲೈಟ್, ಅಂತರ್ಜಾಲ, ಕೃತಕ ಬುದ್ಧಿಮತ್ತೆ ಮುಂತಾದ ವಿಭಾಗಗಳಲ್ಲಿ ಆಗಿರುವ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಹಲವು ರಾಷ್ಟ್ರಗಳು ಸೂಪರ್ ಪವರ್ ಹೆಸರಲ್ಲಿ ಮೆರೆಯುತ್ತಿವೆ.



ಅರಾಜಕ ಜಗತ್ತು ಯುದ್ಧಗಳು ಯಾಕಾದರೂ ನಡೆಯುತ್ತವೆಯೋ ಎಂಬುದು ಜನಸಾಮಾನ್ಯರ ಚಿಂತೆ, ದುಡಿದು ತಿನ್ನುವ ವರ್ಗದವರಿಗೆ ಇದರಿಂದ ಹೆಚ್ಚು ಹೊಡೆತ, ಆಮದು ರಫ್ತುವಿನಲ್ಲಿ ಆಗುವ ವ್ಯತ್ಯಾಸದಿಂದ ದರ ಏರಿಕೆ ಗಗನಕ್ಕೆ ಮುಟ್ಟಿದೆ. ಯುದ್ಧ ಕೆಲವು ದೇಶಗಳ ನಡುವೆ ಆದರೂ ಪರಿಣಾಮ ಇಡೀ ಮಾನವ ಕುಲಕ್ಕೇ ಬರೆ ಎಳೆದುಬಿಡುತ್ತದೆ.

ಯುದ್ಧಗಳಿಂದ ಆಗುವ ಲಾಭವಾದರೂ ಏನು? ಎಂಬುದು ಜನಸಾಮಾನ್ಯರ ಯಕ್ಷ ಪ್ರಶ್ನೆ. ಬೀದಿ ಜಗಳಗಳನ್ನು, ನೆರೆಹೊರೆಯ ಕಿತ್ತಾಟವನ್ನು ನಡುವೆ ಹೋಗಿ ಸಮಾಧಾನಪಡಿಸಿ ನಿಲ್ಲಿಸಬಹುದು. ಜಗಳ ವಿಕೋಪಕ್ಕೆ ತಿರುಗಿದಾಗ ಒಬ್ಬಿಬ್ಬರ ಸಾವುನೋವಿನಿಂದ ಮುಗಿಯಬಹುದು. ದೇಶಗಳ ನಡುವೆ ನಡೆಯುವ ಯುದ್ಧಗಳಲ್ಲಿ ಸಂಭವಿಸುವ ಸಾವು– ನೋವುಗಳು, ಆಸ್ತಿಪಾಸ್ತಿಗಳ ಹಾನಿ, ಪ್ರಕೃತಿ ಮೇಲಿನ ವಿಕೃತಿ, ಮುಂದಿನ ಪೀಳಿಗೆಯ ಆರೋಗ್ಯ.... ಮುಂತಾದ ಹಲವು ಬಗೆಯ ಹಾನಿಗಳನ್ನು ನಿಖರವಾಗಿ ಅಂದಾಜಿಸಲಾಗದು.

ಹಾನಿಯ ಪ್ರಮಾಣ ಮಾತ್ರ ಬಹುದೊಡ್ಡದಿರುತ್ತದೆ. ಮನುಷ್ಯ ಮನುಷ್ಯನಾಗಿರದೆ ರಾಕ್ಷಸನಾಗಿ, ಭೂತಾಯಿಯ ಲಕ್ಷಾಂತರ ಜೀವರಾಶಿಗಳಲ್ಲಿ ವಿಶೇಷ ಜೀವಿಯಾಗಿ ತನ್ನನ್ನು ಪೊರೆದ ಭೂದೇವಿಗೇ ಕಂಟಕನಾಗಿಬಿಟ್ಟ!

ಜಗಳ ಬಿಡಿಸಲು ಎಲ್ಲಾ ಕಡೆ ಇರುವಂತೆ ಇಲ್ಲೂ ಯಾರಾದರೂ ಇರಬೇಕಲ್ಲ? ಮಧ್ಯಸ್ಥಿಕೆ ವಹಿಸಿ ಕೊಂಡು ಸಮಸ್ಯೆಗಳನ್ನು ಬಗೆಹರಿಸಿ ಯುದ್ಧಗಳು ನಡೆಯದಂತೆ ಶಾಂತಿಯನ್ನು ಸ್ಥಾಪಿಸುವವರು ವಿಶ್ವದಲ್ಲಿ ಇದ್ದೂ ಇಲ್ಲವಾಗಿದ್ದಾರೆ. ಇಲ್ಲವಾದವರು ಎಂದರೆ ಬೇರೆ ಯಾರೂ ಅಲ್ಲ. ವಿಶ್ವದ ಮಹಾ ಸಂಸ್ಥೆ ಎನಿಸಿಕೊಂಡಿರುವ, ಹಾಲಿ ಅಸ್ವಸ್ಥರಾಗಿರುವ ವಿಶ್ವಸಂಸ್ಥೆ ಎಂಬ ಜಾಗತಿಕ ಸಂಸ್ಥೆ ಎನ್ನುವುದನ್ನು ನೀವೂ ಒಪ್ಪುತ್ತೀರಲ್ಲವೇ? ಯುದ್ಧವನ್ನು ನಿಲ್ಲಿಸಲು ಮಧ್ಯಸ್ಥಿಕೆಯನ್ನು ವಿಶ್ವಸಂಸ್ಥೆಯ ತಾತ್ಕಾಲಿಕ ಸದಸ್ಯ ರಾಷ್ಟ್ರ ಪಾಕಿಸ್ತಾನ ವಹಿಸುತ್ತದೆ ಎಂದರೆ ವಿಶ್ವಸಂಸ್ಥೆಯ ಸಾಮರ್ಥ್ಯ ಮತ್ತು ಕಾರ್ಯವೈಖರಿ ಎಲ್ಲಿಗೆ ಬಂದಿದೆ ಎನ್ನುವುದು ಪ್ರಶ್ನೆಯಾಗಿದೆ.

ವಿಶ್ವಸಂಸ್ಥೆ ಎಂಬುದು 1945ರ ಅ.24ರಂದು ರೂಪುಗೊಂಡ ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ. 1939 ರಿಂದ 1945ರವರೆಗೆ ಆರು ವರ್ಷಗಳ ಕಾಲ ವಿಶ್ವದ ಎರಡು ಬಣಗಳ ನಡುವೆ ಎರಡನೇ ಮಹಾ ಯುದ್ಧ ನಡೆಯಿತು. ಒಟ್ಟು 70 ದೇಶಗಳ ಸೈನ್ಯವು ಭಾಗವಹಿಸಿದ್ದವು. ಆರು ಕೋಟಿಗೂ ಹೆಚ್ಚು ಜನರು ಪ್ರಾಣ ಕಳೆದುಕೊಂಡರು. ಇಂದು ಕಂಪ್ಯೂಟರ್, ತಂತ್ರಾಂಶ, ರೇಡಾರ್, ಸ್ಯಾಟಲೈಟ್, ಅಂತರ್ಜಾಲ, ಕೃತಕ ಬುದ್ಧಿಮತ್ತೆ ಮುಂತಾದ ವಿಭಾಗಗಳಲ್ಲಿ ಆಗಿರುವ ತಂತ್ರಜ್ಞಾನದ ಅಭಿವೃದ್ಧಿಯಿಂದಾಗಿ ಹಲವು ರಾಷ್ಟ್ರಗಳು ಸೂಪರ್ ಪವರ್ ಹೆಸರಲ್ಲಿ ಮೆರೆಯುತ್ತಿವೆ. ಈಗ ಏನಾದರೂ ಎರಡನೇ ಮಹಾಯುದ್ಧದ ರೀತಿಯಲ್ಲಿ 70 ದೇಶಗಳು ಕೂಡಿ ಯುದ್ಧ ನಡೆಸಿದರೆ ಮಾನವರಿರಲಿ, ಇಡೀ ಭೂಮಿಯೇ ಸರ್ವನಾಶ ಆಗುವುದು ಗ್ಯಾರಂಟಿ!.

ಎರಡನೇ ವಿಶ್ವಯುದ್ಧದ ವಿಜಯಿ ದೇಶಗಳಾದ ಫ್ರಾನ್ಸ್, ಅಮೆರಿಕಾ, ಚೀನಾ, ಸೋವಿಯತ್ ಒಕ್ಕೂಟ ಮತ್ತು ಯುನೈಟೆಡ್ ಕಿಂಗ್ಡಮ್ ದೇಶಗಳ ಪ್ರತಿನಿಧಿಗಳು ವಿಶ್ವಸಂಸ್ಥೆಯ ರೂಪರೇಷೆಗಳನ್ನು ಸಿದ್ಧ ಪಡಿಸಿ ಸ್ಥಾಪಿಸಿದರು. ತರುವಾಯ 1945ರ ಜೂ. 29ರಂದು 51 ದೇಶಗಳು ಒಂದುಗೂಡಿ ವಿಶ್ವಸಂಸ್ಥೆಯ ಸ್ಥಾಪನೆಯನ್ನು ಅಂಗೀಕರಿಸಿದರು. ಇದರಲ್ಲಿ 193 ಸದಸ್ಯ ರಾಷ್ಟ್ರಗಳಿವೆ, ಭಾರತವು 1945ರ ಅ. 30ರಂದು ಇದರ ಸದಸ್ಯತ್ವವನ್ನು ಪಡೆದವು.

ವಿಶ್ವಸಂಸ್ಥೆ ಸ್ಥಾಪನೆಯ ಉದ್ದೇಶ ಒಳ್ಳೆಯದೇ ಆಗಿದೆ. ಮೊದಲ ಮಹಾಯುದ್ಧದ ನಂತರ ಸ್ಥಾಪಿಸಲಾಗಿದ್ದ ರಾಷ್ಟ್ರಗಳ ಸಂಘ(ಲೀಗ್ ಆಫ್ ನೇಷನ್ಸ್) ವಿಫಲತೆ ಕಂಡಿತು. ನಂತರ ನಡೆದ ಎರಡನೇ ಮಹಾಯುದ್ಧದ ಭೀಕರ ಪರಿಣಾಮಗಳನ್ನು ತಿಳಿದು ಮುಂದಿನ ದಿನಗಳಲ್ಲಿ ಯುದ್ಧಗಳನ್ನು ತಡೆಯುವುದು ಹಾಗೂ ವಿಶ್ವಮಟ್ಟದಲ್ಲಿ ಶಾಂತಿ ಮತ್ತು ಸುಭದ್ರತೆ ಕಾಪಾಡಿ ಮಾನವ ಜನಾಂಗದ ಜೀವನಮಟ್ಟವನ್ನು ಸುಧಾರಿಸುವ ಪ್ರಮುಖ ಉದ್ದೇಶದಿಂದ ಸ್ಥಾಪಿಸಲಾಯಿತು.

ರಾಷ್ಟ್ರಗಳ ನಡುವೆ ಪರಸ್ಪರ ಸ್ನೇಹಸಂಬಂಧಗಳನ್ನು ಬೆಸೆಯುವುದು, ಜಾಗತಿಕ ಮಟ್ಟದಲ್ಲಿ ಪ್ರಕೃತಿ ವಿಕೋಪಗಳು, ಸಾಂಕ್ರಾಮಿಕ ರೋಗಗಳು ಮುಂತಾದವುಗಳಿಂದ ಅಶಾಂತಿ ಉಂಟಾದಾಗ, ದೇಶಗಳ ನಡುವೆ ಸಮನ್ವಯ ಸಾಧಿಸಿ ಸಹಾಯ ಹಸ್ತ ನೀಡುವುದಾಗಿದೆ.

ಸದಸ್ಯ ರಾಷ್ಟ್ರಗಳು ಪರಸ್ಪರ ಸಮಾನತೆ, ಸೌಹಾರ್ದತೆ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಸಮಸ್ಯೆಗಳನ್ನು ಸಹಕಾರ ತತ್ವದ ಮೇಲೆ ಬಗೆಹರಿಸಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ ಧೋರಣೆಯನ್ನು ನಿಯಂತ್ರಿಸುವುದು ಆ ಮೂಲಕ ಎಲ್ಲಾ ಜನಾಂಗಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಿ ಆರ್ಥಿಕ, ಸಾಮಾಜಿಕ ಪ್ರಗತಿ ಮತ್ತು ಜನತೆಯ ಜೀವನ ಮಟ್ಟವನ್ನು ಸುಧಾರಿಸುವುದಾಗಿರುತ್ತದೆ.

ಈ ಕಾರ್ಯವನ್ನು ವ್ಯವಸ್ಥಿತವಾಗಿ ನಿರ್ವಹಿಸುವುದಕ್ಕಾಗಿ ಸಾಮಾನ್ಯ ಸಭೆ, ಭದ್ರತಾ ಮಂಡಳಿ, ಆರ್ಥಿಕ ಮತ್ತು ಸಾಮಾಜಿಕ ಮಂಡಳಿ, ಧರ್ಮದರ್ಶಿ ಮಂಡಳಿ, ಅಂತಾರಾಷ್ಟ್ರೀಯ ನ್ಯಾಯಾಲಯ ಹಾಗೂ ಕಾರ್ಯಾಲಯ ಎಂಬ ಆರು ಪ್ರಧಾನ ಸಮಿತಿಗಳನ್ನು ಮತ್ತು ಹಲವು ಉಪಸಮಿತಿಗಳನ್ನು ಹೊಂದಿದೆ. ಇವುಗಳಲ್ಲದೆ ವಿಶ್ವಸಂಸ್ಥೆಗೆ ಹಲವು ಅಂಗಸಂಸ್ಥೆಗಳೂ ಇವೆ.

ಉಪಸಮಿತಿಗಳಲ್ಲಿ ವಿಶ್ವಆಹಾರ ಮತ್ತು ಕೃಷಿ ಸಂಸ್ಥೆ (ಎಫ್ಎಒ), ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ(ಯುಎನ್‌ಸಿಎಸ್‌ಇಒಫ್ ಯುನೆಸ್ಕೊ), ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯೂಎಚ್‌ಒ), ವಿಶ್ವಕಾರ್ಮಿಕ ಸಂಸ್ಥೆ (ಐಎಲ್‌ಒ), ವಿಶ್ವಹಣಕಾಸು ಸಂಸ್ಥೆ(ಐಎಂಎಫ್), ವಿಶ್ವ ನಾಗರೀಕ ವಿಮಾನಯಾನ ಸಾರಿಗೆ ಸಂಸ್ಥೆ(ಐಸಿಎಒ), ವಿಶ್ವಅಣುಶಕ್ತಿ ಸಂಸ್ಥೆ (ಐಎಸಿಎ) ಮತ್ತು ವಿಶ್ವಬ್ಯಾಂಕ್ (ವರ್ಲ್ಡ್ ಬ್ಯಾಂಕ್) ಮುಂತಾದವುಗಳು ಕಾರ್ಯನಿರ್ವಹಿಸುತ್ತಿವೆ.


ಅಂದಿನ ಇಂಗ್ಲೆಂಡ್‌ನ ಪ್ರಧಾನಿ ಚರ್ಚಿಲ್, ಅಮೆರಿಕಾದ ಅಧ್ಯಕ್ಷ ಫ್ರಾಂಕ್ಲಿನ್ ಡಿ.ರೂಸ್‌ವೆಲ್ಟ್ ಹಾಗೂ ರಷ್ಯಾದ ಅಧ್ಯಕ್ಷ ಸ್ಟಾಲಿನ್ ಅವರು ವಿಶ್ವಸಂಸ್ಥೆಯ ಸ್ಥಾಪನೆಗೆ ಪ್ರಮುಖ ರೂವಾರಿಗಳು, ಇದರ ಪ್ರಧಾನ ಕಚೇರಿಯು ಅಮೆರಿಕಾದ ನ್ಯೂಯಾರ್ಕ್ ನಗರದಲ್ಲಿದೆ. ಎಲ್ಲಾ ಕೋನಗಳಿಂದ ಪರಾಮರ್ಶಿಸಿ, ಚರ್ಚಿಸಿ, ನಿಯಮಗಳನ್ನು ರೂಪಿಸಿಕೊಂಡು ಅಧಿಕೃತವಾಗಿ ಹಾಗೂ ವ್ಯವಸ್ಥಿತವಾಗಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

ಪೋರ್ಚ್‌ಗಲ್‌ನವರಾದ ಆಂಟೋನಿಯೋ ಗುಟೆರಸ್ ಅವರು, ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ (ವಿಶ್ವಸಂಸ್ಥೆಗೆ ಮುಖ್ಯಸ್ಥರು) ಆಗಿದ್ದಾರೆ. ಇವರು, ವಿಶ್ವಸಂಸ್ಥೆಯ ಒಂಬತ್ತನೇ ಮಹಾ ಕಾರ್ಯದರ್ಶಿಯಾಗಿದ್ದು, ಇವರ ಅವಧಿ 2017ರ ಜನವರಿ 1ರಿಂದ ಆರಂಭವಾಗಿತ್ತು.

2022ರ ಜ.1ರಿಂದ ಎರಡನೇ ಅವಧಿಗೆ ಮುಂದುವರಿದಿದ್ದಾರೆ. ಎಲ್ಲವೂ ಸರಿಯಾಗಿಯೇ ಇದೆ. ಆದರೆ ಅಮೆರಿಕಾದ ನ್ಯೂಯಾರ್ಕ್‌ನಲ್ಲಿ ಇರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಿಂದ ಕೇವಲ 360 ಕಿಮೀ ದೂರದಲ್ಲಿ ಇರುವ ವಾಷಿಂಗ್ಟನ್ ಡಿಸಿಯ ಶ್ವೇತಭವನದಲ್ಲಿ ಇರುವ ಡೊನಾಲ್ಡ್ ಟ್ರಂಪ್‌ನ್ನು ಭೇಟಿ ಮಾಡಿ ಅಮೆರಿಕಾ–ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ತಡೆಯಲು ಆಗಲಿಲ್ಲವೇ ಆಂಟೋನಿಯಾ ಗುಟೆರಸ್‌ರವರಿಗೆ? ಸಂಧಾನದ ನೀತಿ ನಿಯಮಗಳು ಏನಿವೆಯೋ ಕಾಣೆ.

ಇಂತಹ ಪರಿಸ್ಥಿತಿಯಲ್ಲೂ ವಿಶ್ವಸಂಸ್ಥೆ ಇರುವಿಕೆಯು ಜನರಿಗೆ ಕಾಣದೇ ಇರುವುದು ಇದೂ ಕೂಡ ಮೊದಲ ಮಹಾಯುದ್ಧದ ಬಳಿಕ ಸ್ಥಾಪಿತವಾದ ಲೀಗ್ ಆಫ್ ನೇಷನ್ಸ್‌ನಂತೆ ವಿಫಲವಾಯಿತೆ? ಎಂಬ ಅನುಮಾನವು ಮೂಡದೆ ಇರದು.

ಆರು ಪ್ರಧಾನ ಸಮಿತಿಗಳಲ್ಲಿ ಒಂದಾದ ಭದ್ರತಾ ಮಂಡಳಿಯು ಕಾರ್ಯಾಂಗದ ಮಾದರಿ ಕಾರ್ಯ ನಿರ್ವಹಿಸುತ್ತದೆ. ವಿಶ್ವಶಾಂತಿ ಹಾಗೂ ಭದ್ರತೆ ಕಾಪಾಡುವ ಮೂಲಕ ಮೂರನೇ ಮಹಾಯುದ್ಧ ನಡೆಯುವುದನ್ನು ತಡೆಯುವ ಜವಾಬ್ದಾರಿ ಹೊಂದಿದೆ. ಮಂಡಳಿಯಲ್ಲಿ ಐದು ಖಾಯಂ ಸದಸ್ಯ ರಾಷ್ಟ್ರಗಳು ಹಾಗೂ ಹತ್ತು ತಾತ್ಕಾಲಿಕ ಸದಸ್ಯ ರಾಷ್ಟ್ರಗಳಿವೆ, ಖಾಯಂ ಸದಸ್ಯರಿಗೆ ವಿಟೋ ಅಧಿಕಾರವಿದೆ.



ಭಾರತವು ಈ ಮಂಡಳಿಯಲ್ಲಿ ಸದಸ್ಯತ್ವವನ್ನು ಹೊಂದಿಲ್ಲ. ಖಾಯಂ ಸದಸ್ಯತ್ವವನ್ನು ಪಡೆಯಲು ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳು ಬೆಂಬಲ ನೀಡಿವೆಯಾದರೂ ಭಾರತದ ಮಹತ್ವಾಕಾಂಕ್ಷೆ ಫಲಿಸಿಲ್ಲ. ಖಾಯಂ ಸದಸ್ಯತ್ವ ಪಡೆದಿರುವ ಅಮೆರಿಕಾವು ಶಾಂತಿ ಕಾಪಾಡದೆ ಅದೇ ಯುದ್ಧದಲ್ಲಿ ಮುಂಚೂಣಿಯಲ್ಲಿ ಇರುವುದು ದುರದೃಷ್ಟಕರ.

ಯುದ್ಧಗಳನ್ನು ತಡೆಯಲಾಗದೆ ಕಣ್ಣು, ಕಿವಿ ಮತ್ತು ಬಾಯಿ ಮುಚ್ಚಿ ಕುಳಿತಿರುವ ವಿಶ್ವಸಂಸ್ಥೆಯ ಕೆಲಸವಾದರೂ ಏನು? ಮೂರನೇ ಮಹಾಯುದ್ಧ ನಡೆಯುವ ಸಂಭವ ಇಲ್ಲವೇ ಇಲ್ಲ ಎನ್ನಬಹುದು. ಅಕಸ್ಮಾತ್ ನಡೆದರೆ ಸಂಭವಿಸುವ ಭೀಕರತೆ ಅತೀ ಕರಾಳವಾಗಿರುತ್ತದೆ. ಹಿಂದೆ ಮದ್ದುಗುಂಡುಗಳನ್ನು ಉಪಯೋಗಿಸಿ ಯುದ್ಧ ನಡೆಯುತ್ತಿತ್ತು, ವೈಜ್ಞಾನಿಕ ಅಭಿವೃದ್ಧಿಯ ಕಾರಣ ಹಾಗೂ ಬದಲಾದ ತಂತ್ರಜ್ಞಾನದಲ್ಲಿ ಎಲ್ಲೋ ಕುಳಿತು ಕೇವಲ ಬಟನ್ ಒತ್ತುವ ಮೂಲಕ ಯುದ್ಧಗಳು ನಡೆಯುತ್ತವೆ.

ಪರಮಾಣು ಬಳಕೆ ಆಗದೆ ಇರದು ಎನ್ನುವಂತಿಲ್ಲ. ಭೀಕರವಾದ ಹೋರಾಟದಲ್ಲಿ ಜನರು ಅನ್ನ ನೀರಿಲ್ಲದೆ ಸಾಯುತ್ತಾರೆ. ಫಲವತ್ತಾದ ಭೂಮಿಯೂ ಇಲ್ಲದೆ ಆಹಾರವನ್ನು ಬೆಳೆಯಲಾಗುವುದಿಲ್ಲ. ಯುದ್ಧಗಳು ಇಡೀ ಮಾನವ ಕುಲದ ವಿನಾಶಕ್ಕೆ ಕಾರಣವಾಗುತ್ತದೆ. ಎಲ್ಲವೂ ನಾಶ, ಅಳಿದುಳಿದವರು ಇದ್ದು ಮುಂದೆ ನಾಲ್ಕನೇ ಮಹಾಯುದ್ಧ ನಡೆಯಬಹುದೆಂದು ಕಲ್ಪಿಸಿಕೊಂಡರೆ, ಕಲಿಯುಗದ ಪ್ರಾರಂಭದಲ್ಲಿ ನಡೆದಂತೆ ಯಾವೊಂದು ತಾಂತ್ರಿಕ ಆಯುಧಗಳ ಬಳಕೆ ಇಲ್ಲದೆ ಮಚ್ಚು, ದೊಣ್ಣೆ ಹಾಗೂ ಕಲ್ಲುಗಳನ್ನು ಬಳಸಿ ನಡೆಸುತ್ತಾರೆ ಎಂಬುದು ಸತ್ಯವಾದ ಮಾತು!

ಮನುಷ್ಯನೊಳಗಿನ ಪೈಶಾಚಿಕ ಗುಣ ನಿರ್ಮೂಲವಾಗದ ಹೊರತು ಸುಧಾರಣೆ ಆಗದು. ವಿಶ್ವಸಂಸ್ಥೆಯಲ್ಲಿ ಕುಳಿತಿರುವವರೂ ಮನುಷ್ಯರೇ, ಶಾಂತಿ ಸಂಧಾನ ಮಾಡಲಾಗದೆ ನಂಬಿಕೆಗೆ ಅರ್ಹವಲ್ಲದ ಪಾಕಿಸ್ತಾನದಂತಹ ದೇಶವು ಮುಂದೆ ಬಂದಿರುವುದನ್ನು ನೋಡಿದರೆ ವಿಶ್ವಸಂಸ್ಥೆಯ ಅವಸ್ಥೆ ಹೇಗಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು.

ಶಾಂತಿಗಾಗಿ ಇಡೀ ಜಗತ್ತಿಗೆ ಕುವೆಂಪುರವರ ವಿಶ್ವಮಾನವ ಸಂದೇಶವನ್ನು ತಿಳಿಸಬೇಕಾಗಿದೆ. ವಿಶ್ವಸಂಸ್ಥೆ ಅದನ್ನಾದರೂ ಭಾಷಾಂತರಿಸಿ ಪ್ರಚಾರ ಮಾಡಿದರೆ ಒಂದಷ್ಟು ಮನಸುಗಳು ಪರಿವರ್ತನೆ ಆದಾವು. ಲೇಖನ ಬರೆಯುತ್ತಿರುವಾಗ ನಡುವೆ ನಾದಾನಂದನಾಥ ಸ್ವಾಮೀಜಿಯವರು ತಾವು ರಚಿಸಿದ ಕವನವನ್ನು ನನ್ನ ವಾಟ್ಸ್‌ಆಪ್‌ಗೆ ಕಳುಹಿಸಿದ್ದು, ಅದರ ಕೆಲವು ಸಾಲುಗಳು ಇಲ್ಲಿಗೆ ಸೂಕ್ತವಾಗಿತ್ತು; ಯಾವ ಮನುಷ್ಯರ ಸ್ವಾರ್ಥಕ್ಕೆ ಭೂಮಿ ನಲುಗಿದೆ ಎಚ್ಚರ...!! ಸಮರಸದಿ ಬದುಕು ಕಟ್ಟು ಕನಸ ದೂರ ಬಿಟ್ಟೆವು...!! ಅಣ್ವಸ್ತ್ರಗಳ ಪೈಪೋಟಿಯೊಳಗೆ ರಣರಂಗದಿ ನಿಂತೆವು...!! ಪ್ರಕೃತಿಯೊಳಗೆ ನಾವು ಏನು ಅರ್ಥ ಮಾಡಿಕೊಳ್ಳದೆ ಹೋದೆವು...!!

**– ಮಿರ್ಲೆ ಚಂದ್ರಶೇಖರ**

# ತುಳಿತಕ್ಕೊಳಗಾದವರಿಗೆ ಧ್ವನಿಯಾದ ಅಂಬೇಡ್ಕರ್

## ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಜಾತೀಯತೆಯೂ ಹೆಚ್ಚಳ: ಶಾಸಕ ಎ.ಮಂಜು ವಿಷಾದ

• ಪ್ರಜೋದಯ ವರದಿ

**ಅರಕಲಗೂಡು:** ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ವಿಶ್ವ ಕಂಡ ಅತ್ಯಂತ ಶ್ರೇಷ್ಠ ವ್ಯಕ್ತಿಯಾಗಿದ್ದರು. ಇವರು ತಮ್ಮ ಹೋರಾಟದ ಮೂಲಕ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿದ್ದವರಿಗೆ ಧ್ವನಿಯಾದರು ಎಂದು ಶಾಸಕ ಎ. ಮಂಜು ತಿಳಿಸಿದರು.



ತಾಲ್ಲೂಕು ಆಡಳಿತ ತಾಲ್ಲೂಕು ಕಚೇರಿ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಡಾ. ಅಂಬೇಡ್ಕರ್ ಅವರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಮಾಜದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಜಾತೀಯತೆಯೂ ಹೆಚ್ಚಾಗುತ್ತಿದೆ. ಇದರಿಂದ ಯಾವುದೇ ಜಾತಿ ಉದ್ದಾರವಾಗುತ್ತಿಲ್ಲ, ಜಾತಿಯ ಮುಖಂಡರ ರಕ್ಷಣೆಗೆ ಜಾತಿಯನ್ನು ಮುಂದೆ ತರಲಾಗುತ್ತಿದೆ. ಅಂಬೇಡ್ಕರ್ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿ ಕೊಂಡಾಗ ಜಾತೀಯತೆ ತೊಲಗಿ ಸಮಸಮಾಜ ನಿರ್ಮಾಣವಾಗುತ್ತದೆ ಎಂದರು.

ಬೈಚನಹಳ್ಳಿ ಗ್ರಾಮಾಂತರ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಎಂ.ಎಚ್.ದಿನೇಶ್, ವಕೀಲರಾದ ಶ್ರೀಲಕ್ಷ್ಮಿ ಅಂಬೇಡ್ಕರ್ ವಿಚಾರ ಧಾರೆಗಳ ಕುರಿತು ಪ್ರಧಾನ ಭಾಷಣ ಮಾಡಿದರು. ತಹಶೀಲ್ದಾರ್ ಕೆ.ಸಿ. ಸೌಮ್ಯ ಪ್ರಸ್ತಾವಿಕವಾಗಿ ಮಾತನಾಡಿ, ದರು. ದ್ವಿತೀಯ ಪಿಯು ಪರೀಕ್ಷೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳು, ನಿವೃತ್ತ ಯೋಧ ಮಂಜುನಾಥ್, ಕಾರ್ಗಿಲ್ ಯುದ್ಧದಲ್ಲಿ ವೀರಮರಣ ಹೊಂದಿದ ಅಗ್ರಹಾರ ಗ್ರಾಮದ ಯೋಧ ವೆಂಕಟ ಅವರ ತಾಯಿ ಶಿವಮ್ಮ ಅವರನ್ನು ಗೌರವಿಸಲಾಯಿತು. ತಾಪಂ ಇಒ ಡಿ.ಡಿ. ಪ್ರಕಾಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸಿ.ಆರ್.ರವಿಕುಮಾರ್, ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಪುಟ್ಟರಾಜ್ ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೆ ಮುನ್ನ ತಾಲ್ಲೂಕು ಕಚೇರಿ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ನೂತನವಾಗಿ ನಿರ್ಮಿಸಿರುವ ಗೋಪುರವನ್ನು ಶಾಸಕ ಎ. ಮಂಜು ಉದ್ಘಾಟಿಸಿ ಅಂಬೇಡ್ದರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ಅಂಬೇಡ್ಕರ್ ಭಾವ ಚಿತ್ರದ ಮೆರವಣಿಗೆ ನಡೆಸಲಾಯಿತು. ಸಂಘಟನೆಗಳ ಮುಖಂಡರಾದ ಗಣೇಶ್ ವೇಲಾಪುರಿ, ಚಂದ್ರಪ್ಪ, ವೀರಾಜ್ ಪಾಲ್ಗೊಂಡಿದ್ದರು. ಇದೇ ವೇಳೆ ಕೆಇಬಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಶಾಸಕ ಮಂಜು ಭೂಮಿ ಪೂಜೆ ನೆರವೇರಿಸಿದರು. ಅಂಬೇಡ್ಕರ್ ಜಯಂತಿ ಪ್ರಯುಕ್ತ ವಿಶ್ವಚೇತನ ಜೈಭೀಮ್ ಚಾರಿಟೆಬಲ್ ಟ್ರಸ್ಟ್ ಸದಸ್ಯರು ರಕ್ತದಾನ ಶಿಬಿರ ಏರ್ಪಡಿಸಿದ್ದರು.

**ಗ್ರಾಮ ವಾಸ್ತವ್ಯ:** ಸೋಮವಾರ ರಾತ್ರಿ ತಾಲ್ಲೂಕಿನ ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದ ಚಿನ್ನಮ್ಮ ಅವರ ಮನೆಯಲ್ಲಿ ಶಾಸಕ ಮಂಜು ಗ್ರಾಮ ವಾಸ್ತವ್ಯ ನಡೆಸಿದರು. ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ಅಂಬೇಡ್ಕರ್ ಜಯಂತಿ ಹಿಂದಿನ ದಿನ ದಲಿತ ಸಮುದಾಯದವರ ಮನೆಯಲ್ಲಿ ಗ್ರಾಮ ವಾಸ್ತವ್ಯ ನಡೆಸುವುದನ್ನು ಬಹಳ ವರ್ಷಗಳಿಂದ ಪಾಲಿಸಿಕೊಂಡು ಬಂದಿದ್ದೇನೆ. ಗ್ರಾಮದ ನಿವೇಶನದ ಸಮಸ್ಯೆಯನ್ನು ಕಾನೂನು ಬದ್ದವಾಗಿ ಬಗೆಹರಿಸಿ ಸೂರು ಇಲ್ಲದವರಿಗೆ ಮನೆ ಒದಗಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದ ಕಾಮಗಾರಿ ನೆನಗುದಿಗೆ ಬಿದ್ದಿತ್ತು. ಸರ್ಕಾರದಿಂದ ರೂ 3.5 ಕೋಟಿ ರೂ. ಅನುದಾನ ತಂದು ಕಾಮಗಾರಿ ಮುಂದುವರೆಯಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

# ಇಂಜಿನಿಯರಿಂಗ್ ಕೋರ್ಸ್ ಶುಲ್ಕ ಹೆಚ್ಚಳ

## ಪೋಷಕರಿಗೆ ಮತ್ತೊಂದು ಹೊರೆ ಹೇರಿದ ಸರ್ಕಾರ

• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕದ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮತ್ತು ಅವರ ಪೋಷಕರಿಗೆ ರಾಜ್ಯ ಸರ್ಕಾರ ಮತ್ತೊಂದು ಆಘಾತ ನೀಡಿದೆ. 2026-27ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಇಂಜಿನಿಯರಿಂಗ್ ಕೋರ್ಸ್‌ಗಳ ಶುಲ್ಕವನ್ನು ಶೇಕಡಾ 7.5 ರಷ್ಟು ಹೆಚ್ಚಿಸಲು ತೀರ್ಮಾನಿಸಲಾಗಿದೆ.

ಸತತ ಎರಡನೇ ವರ್ಷವೂ ಈ ಶುಲ್ಕ ಏರಿಕೆ ಮುಂದುವರಿದಿರುವುದು ತಾಂತ್ರಿಕ ಶಿಕ್ಷಣದ ಕನಸು ಕಾಣುತ್ತಿರುವ ಮಧ್ಯಮ ಮತ್ತು ಕೆಳಮಧ್ಯಮ ವರ್ಗದ ಕುಟುಂಬಗಳಿಗೆ ಇದು ಮತ್ತಷ್ಟು ಆರ್ಥಿಕ ಹೊಡೆತ ನೀಡಿದೆ.

ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದಡಿ (ಸಿಇಟಿ ಮೂಲಕ) ಸೀಟು ಪಡೆಯುವ ವಿದ್ಯಾರ್ಥಿಗಳು ಇನ್ನು ಮುಂದೆ ಹೆಚ್ಚಿನ ಮೊತ್ತ ಪಾವತಿಸಬೇಕಾಗುತ್ತದೆ.

ಒಂದೇ ವರ್ಷದಲ್ಲಿ ಸುಮಾರು 6,000 ರೂ.ಗಳಿಂದ 7,000 ರೂ. ಗಳವರೆಗೆ ಹೆಚ್ಚಳವಾಗಿದೆ. ಕಳೆದ ವರ್ಷವಷ್ಟೇ ಸರ್ಕಾರ ಶುಲ್ಕ ಹೆಚ್ಚಿಸಿತ್ತು. ಅದರ ಬೆನ್ನಲ್ಲೇ ಈ ವರ್ಷವೂ ಏರಿಕೆ ಮಾಡಿರುವುದು ಪೋಷಕರ ಆಕ್ರೋಶಕ್ಕೆ ಕಾರಣವಾಗಿದೆ.



**ಸರ್ಕಾರದ ವಾದ:** ಸಿಬ್ಬಂದಿ ವೇತನ, ಮೂಲಸೌಕರ್ಯ ನಿರ್ವಹಣೆ, ಹಣದುಬ್ಬರ ಮತ್ತು ತಾಂತ್ರಿಕ ಅಪ್‌ಗ್ರೇಡ್‌ಗಳನ್ನು ಎದುರಿಸಲು ಶುಲ್ಕ ಹೆಚ್ಚಿಸುವ ಅನಿವಾರ್ಯತೆ ಇದೆ ಎಂದು ಸರ್ಕಾರ ವಾದಿಸುತ್ತದೆ. ಕಾಲೇಜುಗಳ ಆಡಳಿತ ಮಂಡಳಿಗಳು ಬಹುಕಾಲದಿಂದ ಶುಲ್ಕ ಪರಿಷ್ಕರಣೆಯ ಒತ್ತಡ ಹೇರಿದ್ದವು. ಅದರ ಆಧಾರದ ಮೇಲೆ ಶುಲ್ಕ ನಿಯಂತ್ರಣ ಸಮಿತಿ ಈ ಹೆಚ್ಚಳಕ್ಕೆ ಅನುಮೋದನೆ ನೀಡಿದೆ.

ಈಗಾಗಲೇ ನಿತ್ಯಬಳಕೆಯ ವಸ್ತುಗಳಿಂದ ಹಿಡಿದು ಇಂಧನ, ವಿದ್ಯುತ್ ಶುಲ್ಕ ಎಲ್ಲವೂ ಏರಿದೆ. ಅದರ ಮೇಲೆ ಎಂಜಿನಿಯರಿಂಗ್ ಶುಲ್ಕ ಇನ್ನಷ್ಟು ಏರಿಕೆಯಾಗುತ್ತಿರುವುದು ಸಹಿಸಲಾಗದು ಎಂಬ ಮಾತು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ.

ಕಳೆದ ವರ್ಷವೂ ಶುಲ್ಕ ಏರಿಕೆ ವಿರುದ್ಧ ಪ್ರತಿಭಟನೆ ನಡೆದಿತ್ತು. ಆದರೂ ಸರ್ಕಾರ ಈಗ ಮತ್ತೆ ಅದೇ ತಪ್ಪನ್ನು ಪುನರಾವರ್ತಿಸಿದೆ. ಪರೀಕ್ಷಾ ಶುಲ್ಕ, ಪ್ರವೇಶ ಶುಲ್ಕ, ಪ್ರಯೋಗಾಲಯ ಶುಲ್ಕ ಸೇರಿದಂತೆ ಹಲವು ನೆಪಗಳಲ್ಲಿ ಕಾಲೇಜುಗಳು ಹೆಚ್ಚುವರಿ ಹಣ ವಸೂಲಿ ಮಾಡುತ್ತಿವೆ. ಮೂಲ ಶುಲ್ಕ ಏರಿಕೆ ಅಂತಿಮ ಹೊರೆಯಾಗಿ ಪರಿಣಮಿಸಿದೆ.

ವಿದ್ಯಾರ್ಥಿ ಸಂಘಗಳು ಮತ್ತು ಪೋಷಕರ ಸಂಘಟನೆಗಳು ಸರ್ಕಾರದ ಈ ನಿರ್ಧಾರವನ್ನು ಖಂಡಿಸಿ ಪ್ರತಿಭಟನೆಗೆ ಕರೆ ನೀಡಿವೆ. ಬೆಂಗಳೂರಿನಲ್ಲಿ ಮುಂಬರುವ ದಿನಗಳಲ್ಲಿ ವಿದ್ಯಾರ್ಥಿಗಳು ಸಿಇಟಿ ಕಚೇರಿಗೆ ಮುತ್ತಿಗೆ ಹಾಕುವ ಸಾಧ್ಯತೆಯಿದೆ.

## ಡಾ.ಬಿ.ಆರ್.ಅಂಬೇಡ್ಕರ್‌ಗೆ ಮಾಲಾರ್ಪಣೆ



ಆಲೂರು: ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಶಾಸಕ ಸಿಮೆಂಟ್ ಮಂಜು ಅವರು ಅಂಬೇಡ್ಕರ್‌ರವರ ಪುತ್ತಳಿಗೆ ಮಾಲಾರ್ಪಾಣೆ ಮಾಡಿ ವಂದಿಸಿದರು. ತಹಸೀಲ್ದಾರ್ ಮಲ್ಲಿಕಾರ್ಜುನ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೌಸರ್ ಅಹಮದ್, ದಲಿತ ಮುಖಂಡರು ಸೇರಿದಂತೆ ವಿವಿಧ ಪಕ್ಷಗಳ ಜನಪ್ರತಿನಿಧಿಗಳು ಹಾಜರಿದ್ದರು.

## 2028ರಲ್ಲಿ ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ

• ಪ್ರಜೋದಯ ವರದಿ

**ನಾಗಮಂಗಲ:** ಮುಂಬರುವ 2028 ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆಯಾಗಲಿದೆ. ಯಾರು ಮುಖ್ಯಮಂತ್ರಿಯಾಗ ಬೇಕೆಂದು ಪ್ರಧಾನಿ ನರೇಂದ್ರ ಮೋದಿ ತೀರ್ಮಾನಿಸಲಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2028ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ನೇತೃತ್ವದ ಸರ್ಕಾರ ರಚನೆಯಾಗಲಿದೆ. ಜೆಡಿಎಸ್ ಕೂಡ ಜೊತೆಗೆ ಇರಲಿದೆ. ಯಾರು ಮುಖ್ಯಮಂತ್ರಿಯಾಗಬೇಕು ಎಂದು ಪ್ರಧಾನಿ ನರೇಂದ್ರಮೋದಿ, ಸಚಿವ ಅಮಿತ್ ಶಾ ಮೊದಲಾದ ನಾಯಕರು ತೀರ್ಮಾನಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

# ಅಂಬೇಡ್ಕರ್ ಸಂವಿಧಾನದ ಶೇ.40 ರಷ್ಟು ಮಾತ್ರವೇ ಬಳಕೆ

• ಪ್ರಜೋದಯ ವರದಿ

**ಹೊಳೆನರಸೀಪುರ:** ಅಂಬೇಡ್ಕರ್ ಬರೆದ ಸಂವಿಧಾನದ ಶೇ.40 ರಷ್ಟು ಮಾತ್ರವೇ ಬಳಕೆ ಮಾಡಿಕೊಳ್ಳಲಾಗಿದೆ ಎಂದು ಹಿರಿಯ ವಕೀಲ ರಾಜಶೇಖರ್ ಅವರು ವ್ಯಾಖ್ಯಾನಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ ಆಯೋಜಿಸಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್‌ರ 135 ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂವಾರಸ ಕಾಯ್ದೆ ಜಾರಿಗೆ ತಂದರು. ಲೋಕ ಸಭೆಗೆ ಚುನಾಯಿತರಾಗದೇ ರಾಜ್ಯ ಸಭೆಯ ಸದಸ್ಯರಾಗಿ ಆಯ್ಕೆಯಾದರು. ಕೆಲವು ವಿದ್ಯ್ಯಮಾನ ಬೆಳವಣಿಗೆಯಿಂದ ಬೇಸತ್ತು ರಾಜೀನಾಮೆ ನೀಡಿದರು. ಅವರ ದೀಮಂತ ವ್ಯಕ್ತಿತ್ವಕ್ಕೆ ಇವರ ಜೀವನದ ಚರಿತ್ರೆ ಸಾಕ್ಷಿಯಾಗಿದೆ. ಅವರ ವಿಚಾರಧಾರೆಯನ್ನು ಮೊಗೆದಷ್ಟೂ ಮತ್ತಷ್ಟೂ ಇದ್ದೇ ಇರುತ್ತದೆ. ಅಂತಹಾ ವ್ಯಕ್ತಿ ವೈಚಿತ್ಯ ಬೇರೆಯವರಲ್ಲಿ ನಾವೆಂದೂ ಕಾಣಲಾಗದು ಎಂದು ಹೇಳಿದರು.



ಮಹಿಳೆಯರ ಹಿತರಕ್ಷಣೆ, ಮೀಸಲಾತಿ ಪರಿಕಲ್ಪನೆ ಮೊಟ್ಟ ಮೊದಲ ಬಾರಿಗೆ ಅನುಷ್ಟಾನಗೊಳಿಸಿದ ಕೀರ್ತಿ ಅಂಬೇಡ್ಕರ್‌ಗೆ ಸಲ್ಲುತ್ತದೆ. ಅಸ್ಪೃಶ್ಯತೆಯನ್ನು ಸ್ವಯಂ ವಿರೋಧಿಸಿಕೊಂಡು ಬೆಳೆದ ಅವರು, ಅದರಿಂದ ನಲುಗಿದ್ದರು. ಹೀಗಾಗಿಯೇ ಧರ್ಮ ಸಹಿಷ್ಣುತೆಯ ಜೀವ ರಕ್ಷಣೆಗಳ ಮಜಲುಗಳಿಗೆ ಜೀವ ತುಂಬಿದ್ದರು. ಬುದ್ದನ ಅನುಯಾಯಿಯಾಗಿ ಬೌದ್ಧ ಧರ್ಮವನ್ನು ಅನುಸರಿಸಿದ್ದರು. ಇಂದು ಅವರ ಜಯಂತೋತ್ಸವನ್ನು ಆಚರಿಸುವ ಮೂಲಕ ಅವರಿಗೆ ಗೌರವ ಸೂಚಿಸಬೇಕು. ಆಗ ಮಾತ್ರ ಕೃತಜ್ಞತಾ ಮನೋಧರ್ಮ ಅನುಸರಿಸಿದಂತಾಗುತ್ತದೆ ಎಂದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವ ಚಿತ್ರದ ಮೆರವಣಿಗೆಯನ್ನು ಮಂಗಳೂರಿನಿಂದ ಆಗಮಿಸಿದ್ದ ಕಲಾತಂಡಗಳ ನೃತ್ಯ ಪ್ರದರ್ಶನದೊಂದಿಗೆ ಮೆರವಣಿಗೆ ನಡೆಸಲಾಯಿತು. ಸಂಸದ ಶ್ರೇಯಸ್ ಎಂ.ಪಟೇಲ್ ಮೆರವಣಿಗೆಗೆ ಚಾಲನೆ ನೀಡಿದರು.

ಪಟ್ಟಣದ ಬಸ್ ನಿಲ್ದಾಣದ ಎದುರಿನ ಅಂಬೇಡ್ಕರ್ ಪ್ರತಿಮೆಗೆ ಶಾಸಕ ಎಚ್.ಡಿ.ರೇವಣ್ಣ ಮಾಲಾರ್ಪಣೆ ಮಾಡಿದರು. ಎಲ್ಲರಿಗೂ ಶುಭಾಷಯ ಕೋರಿದರು. ತಾಲ್ಲೂಕು ಆಡಳಿತ ಶಾಸಕನಾದ ನನಗೆ ಆಹ್ವಾನಿಸಿಲ್ಲ ಎಂದು ಮಾಧ್ಯಮಗಳಿಗೆ ತಿಳಿಸಿದರು. ಆದರೆ ತಹಸೀಲ್ದಾರ್ ವೈ.ಎಂ.ರೇಣುಕುಮಾರ್ ಆಹ್ವಾನ ಪತ್ರಿಕೆ ನೀಡಿದ್ದೇವೆ. ಅವರು ಏಕೆ ಹಾಗೆ ಹೇಳಿದರು ಎಂದು ನನಗೆ ಗೊತ್ತಿಲ್ಲ ಎಂದು ಸ್ಪಷ್ಟೀಕರಣ ನೀಡಿದರು.

ತಹಸೀಲ್ದಾರ್ ವೈ.ಎಂ.ರೇಣುಕುಮಾರ್, ತಾಪಂ ಇಒ ಮುನಿರಾಜ್, ಪುರಸಭಾ ಮುಖ್ಯಾಧಿಕಾರಿ ಶಿವಶಂಕರ್, ವಿಶ್ವರತ್ನ ಡಾ.ಬಿ.ಆರ್. ಅಂಬೇಡ್ಕರ್ ಟ್ರಸ್ಟ್‌ನ ಗೌರವಾಧ್ಯಕ್ಷ ಎಚ್.ವೈ.ಚಂದ್ರಶೇಖರ್, ಉಪಾಧ್ಯಕ್ಷ ಎಚ್.ಟಿ.ಲಕ್ಷ್ಮಣ್, ಕಾರ್ಯದರ್ಶಿ ಕೃಷ್ಣಮೂರ್ತಿ, ಜಂಟಿ ಕಾರ್ಯದರ್ಶಿ ಪಾಸ್ವಾನ್, ಪುರಸಭಾ ಮಾಜಿ ಸದಸ್ಯರಾದ ರಾಘವೇಂದ್ರ, ಜವರೇಶ್ ಹಾಗೂ ಉಮೇಶ್ ಹಾಜರಿದ್ದರು.

# ಒಳಮೀಸಲಾತಿ ಜಾರಿಗೆ ರಾಜಕೀಯ ಇಚ್ಛಾಶಕ್ತಿ ಕೊರತೆ ಕಾರಣ

## ಮಾದಿಗರಲ್ಲಿ ಸಂಘಟನೆ, ಸಾಮರಸ್ಯ ಹೆಚ್ಚಾಗಬೇಕು

• ಪ್ರಜೋದಯ ವರದಿ

**ಅರಸೀಕೆರೆ:** ಮಾದಿಗರಲ್ಲಿ ಸಂಘಟನೆ, ಸಾಮರಸ್ಯ ಹೆಚ್ಚಾಗಬೇಕು, ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸದೃಢವಾಗಬೇಕು. ಬದುಕಿನಲ್ಲಿ ಗಟ್ಟಿಯಾಗುವ ಪ್ರಯತ್ನ ಸದಾ ನಮ್ಮದಾಗಿರಬೇಕು, ನಮಗೆ ಈ ಸಮಯ ಪಡೆದುಕೊಳ್ಳುವ ಸಮಯ ಇದರ ಸದುಪಯೋಗವನ್ನು ಒಳ ಮೀಸಲಾತಿ ಜಾರಿ ಮಾಡಿಸಿಕೊಳ್ಳುವ ಮೂಲಕ ಪಡೆದುಕೊಳ್ಳಬೇಕು ಎಂದು ಆದಿಜಾಂಬವ ಸಂಸ್ಥಾನ ಕೋಡಿಹಳ್ಳಿ ಮಠದ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿ ಅವರು ಹೇಳಿದರು.



ನಗರದ ಸಿಂಧು ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಾದಿಗ ಸಮುದಾಯಕ್ಕೆ ಈ ಸಮಯ ಬಹು ಮುಖ್ಯವಾದ ಸಮಯ ದಶಕಗಳಿಂದ ಕಳೆದುಕೊಂಡಿದ್ದನ್ನು ಪಡೆದುಕೊಳ್ಳುವ ಸಮಯ, ಈ ಸಮಯದಲ್ಲಿ ನಾವು ಮೈ ಮರೆಯಬಾರದು ಎಂದು ಕಿವಿಮಾತು ಹೇಳಿದರು.

ರಾಜ್ಯದಲ್ಲಿ ಮಾದಿಗ ಸಮುದಾಯ ಅತಿ ಹೆಚ್ಚಿದ್ದು, ನಮಗೆ ಮೀಸಲಾತಿಯಲ್ಲಿ ಸಿಗುತ್ತಿರುವ ಪಾಲು ಅತಿ ಕಡಿಮೆಯಿದೆ. ಈ ತಾರತಮ್ಯ ಕೊನೆಯಾಗಬೇಕಾದರೆ ಒಳ ಮೀಸಲಾತಿ ಜಾರಿಯಾಗಲು ಬೇಕಾದ ಹೋರಾಟಗಳನ್ನು ಒಗ್ಗಟ್ಟಾಗಿ ಮಾಡಬೇಕು. ಯಾವುದೇ ಸರ್ಕಾರ ನಮ್ಮ ಕಡೆ ಗಮನ ಹರಿಸಬೇಕೆಂದರೆ ನಮ್ಮ ಒಗ್ಗಟ್ಟು ಅತಿ ಮುಖ್ಯ, ಸರ್ಕಾರಕ್ಕೆ ಮಾದಿಗ ಸಮುದಾಯಕ್ಕಾಗುತ್ತಿರುವ ಅನ್ಯಾಯವನ್ನು ಮನವರಿಕೆ ಮಾಡಿಕೊಳ್ಳುವ ಕೆಲಸ ಈಗಾಗಲೇ ಮಾಡಲಾಗಿದೆ. ಇರುವ ಒಂದು ತಟ್ಟೆಯ ಅನ್ನದಲ್ಲಿ ನೂರಾರು ಕೈಗಳಿಗೆ ಅವಕಾಶ ಕೊಟ್ಟು ನಮಗೆ ಅನ್ಯಾಯ ಮಾಡಿದ್ದನ್ನು ಸಹಿಸಿಕೊಳ್ಳುವ ಕೆಲಸ ಕೈಬಿಟ್ಟು ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಳ್ಳುವ ಕೆಲಸವನ್ನು ಮಾಡಬೇಕಿದೆ.

ಈ ವೇಳೆ ಮುಖ್ಯ ಭಾಷಣಕರಾಗಿ ಆಗಮಿಸಿದ್ದ ಭೀಮ ಶಂಕರ್ ಅವರು ಮಾತನಾಡಿ, ಈಗಿನ ರಾಜ್ಯಸರ್ಕಾರಕ್ಕೆ ರಾಜಕೀಯ ಹಿತಾಸಕ್ತಿ ಇಲ್ಲ, ಒಳ ಮೀಸಲಾತಿ ವಿಚಾರದಲ್ಲಿ ಹೆಚ್ಚುವರಿ ಮೀಸಲಾತಿ ಕಲ್ಪಿಸಲು ಮೀನಮೇಷ ಎಣಿಸುತ್ತಿದ್ದು, ಮಾದಿಗರಿಗೆ ನ್ಯಾಯ ದೊರಕಿಸಿಕೊಡುವ ಹಿಚ್ಚಶಕ್ತಿಯೂ ಸಹ ಈ ಸರ್ಕಾರ ಇಲ್ಲದಿರುವುದು ವಿಪರ್ಯಾಸ ಎಂದರು.

ಶಿವರಾಜ್ ಮೈಸೂರು, ನಾಗವೇದಿ ಕರಿಯಪ್ಪ, ಸಿಡಿ ನಿಂಗಪ್ಪ, ಸಂಕೊಡನಹಳ್ಳಿ ಮಂಜುನಾಥ್, ಮೈಲನಹಳ್ಳಿ ಗುರು ನಾಗರಾಜ್ ಸ್ವಾಮಿ, ವೈದ್ಯರಾದ ಡಾ.ಶಿವಕುಮಾರ್, ನಿವೃತ್ತ ಇಂಜಿನಿಯರ್ ನಾಗವೇದಿ ಶೇಖರಪ್ಪ ಇನ್ನಿತರರು ಹಾಜರಿದ್ದರು.

# ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ: ಹಲವರಿಂದ ರಕ್ತದಾನ

## ಶೋಷಿತ ಸಮುದಾಯಗಳು ಮುಂದೆ ಬರಲು ಶಿಕ್ಷಣದಿಂದ ಮಾತ್ರ ಸಾಧ್ಯ

• ಪ್ರಜೋದಯ ವರದಿ

**ಬೇಲೂರು:** ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜಯಂತಿ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ತಾಲ್ಲೂಕು ಸಮಿತಿ ಕಾರ್ಯಕರ್ತರು ಡಾ. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಸಲ್ಲಿಸಿ, 25ಕ್ಕೂ ಹೆಚ್ಚು ಜನರು ಉಚಿತವಾಗಿ ರಕ್ತದಾನ ಮಾಡುವ ಮೂಲಕ ಮಂಗಳವಾರ ಡಾ.ಅಂಬೇಡ್ಕರ್ ಜಯಂತಿಯನ್ನು ಆಚರಿಸಿದರು.



ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಮೈಸೂರು ವಿಭಾಗಿಯ ಸಂಘಟನಾ ಸಂಚಾಲಕ ಬಿ.ಎಲ್.ಲಕ್ಷ್ಮಣ್ ಮಾತನಾಡಿ, ಶೋಷಿತ ಸಮುದಾಯಗಳು ಸಮಾಜದ ಮುಖ್ಯ ವಾಹಿನಿಗೆ ಬರಬೇಕೆಂದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ ಎಂಬುದನ್ನು ಜಗತ್ತಿಗೆ ತೋರಿಸಿ ಕೊಟ್ಟವರೆ ಡಾ.ಅಂಬೇಡ್ಕರ್‌ರವರು. ದೀನ ದಲಿತರ ಏಳಿಗೆಗಾಗಿ ಸಮಾನತೆಯ ಹಕ್ಕಿಗಾಗಿ ತಮ್ಮ ಜೀವನವನ್ನೇ ಮುಡಿಪಾಗಿರಿಸಿದವರು. ಮಹಿಳೆಯರ ಹಕ್ಕುಗಳಿಗಾಗಿ ಮಂತ್ರಿ ಪದವಿಗೆ ರಾಜೀನಾಮೆ ನೀಡಿದ ಮಹಾನ್ ವ್ಯಕ್ತಿ. ಅವರ ಜನ್ಮ ದಿನಾಚರಣೆಯನ್ನು ವಿಶ್ವದಾದ್ಯಂತ ಹಬ್ಬವನ್ನಾಗಿ ಆಚರಿಸಲಾಗುತ್ತಿದೆ ಎಂದರು.

ಡಾ.ಅಂಬೇಡ್ಕರ್‌ರವರು ಶೋಷಿತ ಸಮಾಜದವರ ಹಕ್ಕುಗಳಿಗಾಗಿ ಹೋರಾಡಿ ಭಾರತದ ಸಂವಿಧಾನ ರಚಿಸಿ ತಳ ಸಮುದಾಯಗಳ ನ್ಯಾಯ ಕೊಡುವ ಮೂಲಕ ಎಲ್ಲ ಜಾತಿ ಜನಾಂಗದ ವರಿಗೂ ಆದರ್ಶ ಪ್ರಾಯವಾಗಿದ್ದಾರೆ. ಅಂಬೇಡ್ಕರ್‌ರವರ ತತ್ವ, ಆದರ್ಶಗಳು ಇಂದಿನ ಯುವ ಪೀಳಿಗೆಗೆ ಬಹು ಮುಖ್ಯವಾಗಿದ್ದು, ಪ್ರತಿಯೊಬ್ಬರೂ ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆದರೆ ದೇಶದಲ್ಲಿ ಸಮ ಸಮಾಜ ನಿರ್ಮಾಣವಾಗಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮುಂದಾಗಬೇಕು. ಜತೆಗೆ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ನಮ್ಮ ಸಂಘಟನೆಯಿಂದ ಪ್ರತಿಮೆಗೆ ಪುಷ್ಪಹಾರ ಸಲ್ಲಿಸಿದ ನಂತರ ಪ್ರತಿ ವರ್ಷದಂತೆ ಉಚಿತವಾಗಿ ರಕ್ತದಾನ ಮಾಡುವ ಮೂಲಕ ಆಚರಿಸುತಿದ್ದೇವೆ ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ಜಿಲ್ಲಾ ಮುಖಂಡರಾದ ಹೊಯ್ಸಳ, ಕೃಷ್ಣಯ್ಯ, ತಾಲೂಕು ಸಂಘಟನಾ ಸಂಚಾಲಕರಾದ ನಿಂಗರಾಜು, ವಸಂತ ಕುಮಾರ್, ಪ್ರವೀಣ್, ಪ್ರದೀಪ್, ದೇವರಾಜು, ಮಲ್ಲೇಶ್, ಕಿರಣ್, ವೆಂಕಟೇಶ್, ಇತರರಿದ್ದರು

# ಮಹಿಳಾ ಮೀಸಲಾತಿ ಜಾರಿ: ಪ್ರಜಾಪ್ರಭುತ್ವಕ್ಕೆ ಚೈತನ್ಯ

• ಪ್ರಜೋದಯ ವರದಿ

**ನವದೆಹಲಿ** ಮುಂದಿನ 2029ರಲ್ಲಿ ನಡೆಯುವ ಲೋಕಸಭೆ ಹಾಗೂ ವಿವಿಧ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಮಹಿಳಾ ಮೀಸಲಾತಿ ಸಂಪೂರ್ಣ ಜಾರಿಗೆ ಬಂದರೆ, ಭಾರತೀಯ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠ ಮತ್ತು ಚೈತನ್ಯಮಯವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ದೇಶದ ಮಹಿಳೆಯರಿಗೆ ಬರೆದ ಪತ್ರದಲ್ಲಿ, ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಸಾಧನೆ ಮಾಡುತ್ತಿರುವ ಹಿನ್ನೆಲೆಯಲ್ಲಿ ವಿಧಾನಮಂಡಲಗಳಲ್ಲಿ ಅವರ ಪ್ರತಿನಿಧಿತ್ವ ಹೆಚ್ಚುವುದು ಅತ್ಯವಶ್ಯಕ ಎಂದು ಮೋದಿ ತಿಳಿಸಿದ್ದಾರೆ.ಇದೇ ವೇಳೆ ಸಂಸತ್ತಿನಲ್ಲಿ ನಾರಿ ಶಕ್ತಿ ವಂದನ ಅಧಿನಿಯಂ ಗೆ ಅಗತ್ಯ ತಿದ್ದುಪಡಿ ತಕ್ಷಣ ಅಂಗೀಕರಿಸಬೇಕು ಎಂದು ಒತ್ತಾಯಿಸಿದ್ದಾರೆ.



ಏಪ್ರಿಲ್ 16ರಿಂದ ಆರಂಭವಾಗುವ ಮೂರು ದಿನಗಳ ವಿಶೇಷ ಸಂಸತ್ ಅಧಿವೇಶನದಲ್ಲಿ ಈ ತಿದ್ದುಪಡಿಗಳನ್ನು ಅಂಗೀಕರಿಸಬೇಕು ಆದರೆ, ಇನ್ನಷ್ಟು ವಿಳಂಬವಾದರೆ ಅದು ಭಾರತದ ಮಹಿಳೆಯರಿಗೆ ಅನ್ಯಾಯವಾಗುತ್ತದೆ ಎಂದು ತಿಳಿಸಿದ್ದಾರೆ.ಭಾರತದ ಹೆಣ್ಣು ಮಕ್ಕಳು ತಮ ಹಕ್ಕಿಗಾಗಿ ಅನಂತ ಕಾಲ ಕಾಯಲು ಹೇಳಲು ಸಾಧ್ಯವಿಲ್ಲ. ವಿಧಾನಮಂಡಲಗಳಲ್ಲಿ ಮಹಿಳೆಯರ ಧ್ವನಿ ಬಲವಾದರೆ ಪ್ರಜಾಪ್ರಭುತ್ವದ ಧ್ವನಿಯೇ ಬಲವಾಗುತ್ತದೆ ಎಂದು ಮೋದಿ ತಿಳಿಸಿದ್ದಾರೆ.

ಇದೇ ವೇಳೆ, ಮುಂಬರುವ ಸಂಸತ್ ಅಧಿವೇಶನದಲ್ಲಿ ಸಂವಿಧಾನ ತಿದ್ದುಪಡಿ ಅಂಗೀಕಾರಕ್ಕಾಗಿ ದೇಶದ ಮಹಿಳೆಯರು ಆಶೀರ್ವಾದ ನೀಡಬೇಕು ಮತ್ತು ತಮ್ಮ ಸ್ಥಳೀಯ ಸಂಸದರಿಗೆ ಪತ್ರ ಬರೆದು ಬೆಂಬಲ ನೀಡಬೇಕು ಎಂದು ಪ್ರಧಾನಿ ಮನವಿ ಮಾಡಿದ್ದಾರೆ.

2023ರ ಸೆಪ್ಟೆಂಬರ್‌ನಲ್ಲಿ ಸಂಸತ್ ನಾರಿ ಶಕ್ತಿ ವಂದನ ಅಧಿನಿಯಂ ಅನ್ನು ಅಂಗೀಕರಿಸಿತ್ತು. ಈ ಕಾಯ್ದೆಯಡಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33% ಸ್ಥಾನಗಳನ್ನು ಮೀಸಲಿಡುವ ವ್ಯವಸ್ಥೆ ಮಾಡಲಾಗಿದೆ.ಈ ತಿದ್ದುಪಡಿ ಜಾರಿಯಾದರೆ ಲೋಕಸಭಾ ಸ್ಥಾನಗಳ ಸಂಖ್ಯೆ 816ಕ್ಕೆ ಏರಿಕೆಯಾಗಲಿದ್ದು, ಅದರಲ್ಲಿ 273 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗುತ್ತದೆ.

# ಪ್ರತಿಯೊಬ್ಬರೂ ಶಿಕ್ಷಣದ ಮೂಲಕ ಜೀವನ ರೂಪಿಸಿಕೊಳ್ಳಬೇಕು

## ಅದೃಷ್ಟ, ಗ್ರಹಚಾರ, ಹಣೆಬರಹ ಎಂಬ ಮೌಢ್ಯ ನಂಬಬೇಡಿ

• ಪ್ರಜೋದಯ ವರದಿ

**ಆಲೂರು:** ಅದೃಷ್ಟ, ಗ್ರಹಚಾರ ಅಥವಾ ಹಣೆಬರಹ ಎಂಬ ಮೌಢ್ಯವನ್ನು ನಂಬಬೇಡಿ. ಶಿಕ್ಷಣದ ಮೂಲಕ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ಹಾಸನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಅವರು ತಿಳಿಸಿದರು.

ಪಟ್ಟಣದ ಮಿನಿ ವಿದಾನಸೌಧ ಆವರಣಲ್ಲಿ ತಾಲ್ಲೂಕು ಆಡಳಿತ, ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ, ಡಾ. ಬಿ. ಆರ್.ಅಂಬೇಡ್ಕರ್ ರವರು 135 ನೆ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.



ಯಾವ ದೇಶದಲ್ಲಿ ಬೆಳಗ್ಗೆ ದೇವಾಲಯದ ಗಂಟೆಗಳು ಭಾರಿಸುತ್ತವೊ ಆ ದೇಶ ಮುಂದುವರಿಯುವುದಿಲ್ಲ. ಯಾವ ದೇಶದಲ್ಲಿ ಬೆಳಗ್ಗೆ ಶಾಲೆ ಗಂಟೆಗಳು ಮೊಳಗುತ್ತವೆಯೊ, ಆ ದೇಶ ಸರ್ವತೋಮುಖವಾಗಿ ಮುಂದುವರಿಯುತ್ತದೆ ಎಂದು ಅಂಬೇಡ್ಕರ್ ಅವರು ಹೇಳಿದ್ದಾರೆ. ಅಂಬೇಡ್ಕರ್ ಅವರು ತಮ್ಮ ಬದುಕಿನಲ್ಲಿ ಎಂದೂ ಸುಖವನ್ನು ಅನುಭವಿಸಿಲ್ಲ.

ಇಡಿ ಪ್ರಪಂಚದಲ್ಲಿ 29 ಪದವಿಗಳನ್ನು ಪಡೆದ ಏಕೈಕ ವ್ಯಕ್ತಿ, ತಾನು ತನಗಾಗಿ ಬದುಕತೆ ನಿಸ್ವಾರ್ಥತೆಯಿಂದ ಸಮಾಜದಲ್ಲಿ ನೊಂದವರು, ಅಸಹಾಯಕರಿಗೆ ತನ್ನ ತನು, ಮನವನ್ನು ತ್ಯಾಗ ಮಾಡಿದವರು ಅಂಬೇಡ್ಕರ್ ಎಂದು ನೆನಪಿಸಿಕೊಂಡರು.

ಮಾಜಿ ಸಚಿವ ಎಚ್.ಕೆ.ಕುಮಾರಸ್ವಾಮಿ ಅವರು ಮಾತನಾಡಿ, ಅಂಬೇಡ್ಕರ್ ಅವರು ಕೇಂದ್ರ ಮಂತ್ರಿಯಾಗಿದ್ದ ಸಂದರ್ಭದಲ್ಲಿ ಮಹಿಳೆಯರಿಗೆ ಮೀಸಲಾತಿ ಕೊಡಬೇಕು ಎಂದು ಧ್ವನಿ ಎತ್ತಿದ್ದ ಮೊದಲಿಗರು ಎಂದರು. ಮೌನದಿಂದ ಎಲ್ಲವನ್ನೂ ಗೆಲ್ಲಬಹುದು ಎಂಬುದಕ್ಕೆ ಅಂಬೇಡ್ಕರ್ ಮಾದರಿಯಾಗಿದ್ದಾರೆ ಎಂದರು.

ತಹಸೀಲ್ದಾರ್ ಮಲ್ಲಿಕಾರ್ಜುನ ಅವರು ಮಾತನಾಡಿ, ಅಂಬೇಡ್ಕರ್ ಅವರು ಸಮಾಜದಲ್ಲಿ ಸಮಾನತೆ, ಶಿಕ್ಷಣದ ಬಗ್ಗೆ ಸಾರಿದ ಮಹಾನ್ ವ್ಯಕ್ತಿ ಎಂದು ಬಣ್ಣಿಸಿದರು.

ಸಭೆಯಲ್ಲಿ ತಾ. ಪಂ. ಕಾರ್ಯ ನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಶರ್ಮ, ಕ್ಷೇತ್ರ ಶಿಕ್ಷಣಾಧಿಕಾರಿ ಎ. ಜೆ.ಕೃಷ್ಣೇಗೌಡ, ಪ.ಪಂ. ಮುಖ್ಯಾಧಿಕಾರಿ ಮಂಜುನಾಥ್, ಜಿ. ಪಂ. ಮಾಜಿ ಸದಸ್ಯೆ ಚಂಚಲ ಕುಮಾರಸ್ವಾಮಿ, ಅರಸಯ್ಯ, ಬಸವರಾಜ್, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೌಸರ್ ಅಹಮದ್, ಶಿಕ್ಷಕಿ ವೇದಾವತಿ ಉಪಸ್ಥಿತರಿದ್ದರು.

## ಭಾರತದ ಸಂವಿಧಾನದಿಂದ ಸರ್ವರಿಗೂ ಸಮಾನತೆ | ಮಾನವ ಬಂಧುತ್ವ ಬೆಳೆಸಿ ವಿಶ್ವಶಾಂತಿಗೆ ಮಹತ್ವದ ಕೊಡುಗೆ

# ಜಾತಿ, ಮತ, ಭೇದಗಳನ್ನು ಮೀರಿ ಎಲ್ಲರೂ ಒಂದಾಗಬೇಕು

• ಪ್ರಜೋದಯ ವರದಿ

**ಸಕಲೇಶಪುರ:** ಜಾತಿ ವ್ಯವಸ್ಥೆಯಿಂದ ಹೊರಬಂದು ಸಂವಿಧಾನದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಕೇವಲ ಆಚರಣೆಗಳಿಗೆ ಸೀಮಿತಗೊಳಿಸಿದರೆ ಮಹನೀಯರ ತತ್ವಗಳು ಉಳಿಯುವುದಿಲ್ಲ ಎಂದು ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಸಂವಿಧಾನ ಶಿಲ್ಪಿ, ವಿಶ್ವನಾಯಕ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಸಂವಿಧಾನವು ಸರ್ವರಿಗೂ ಸಮಾನತೆ ಒದಗಿಸುವುದರ ಜೊತೆಗೆ ಮಾನವ ಬಂಧುತ್ವವನ್ನು ಬೆಳೆಸಿ ವಿಶ್ವಶಾಂತಿಗೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಅವರು ತಿಳಿಸಿದರು.

ಭಾರತದ ಸಂವಿಧಾನವು ಜಾತ್ಯಾತೀತ, ಧರ್ಮನಿರಪೇಕ್ಷ ಹಾಗೂ ಸಮಾಜವಾದಿ ರಾಷ್ಟ್ರ ನಿರ್ಮಾಣಕ್ಕೆ ದಾರಿ ತೋರಿಸಿದ್ದು, ಪ್ರಜೆಯೇ ಪ್ರಭುಗಳಾಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಪಡಿಸಿದೆ. ಯುದ್ಧ ಭೀತಿಯ ಇಂದಿನ ಜಗತ್ತಿನಲ್ಲಿ ಮಾನವೀಯತೆ, ಶಾಂತಿ ಮತ್ತು ಸಹಬಾಳ್ವೆ ಮುಖ್ಯವಾಗಬೇಕು.ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ ಚಿಂತನೆಗಳು ''ಮನುಷ್ಯನೇ ಒಂದೇ ಜಾತಿ'' ಎಂಬ ತತ್ವವನ್ನು ಸಾರುತ್ತವೆ. ಜಾತಿ-ಮತ ಭೇದಗಳನ್ನು ಮೀರಿ ಎಲ್ಲರೂ ಒಂದಾಗಬೇಕು ಎಂದು ಅವರು ಕರೆ ನೀಡಿದರು.

ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಮುರಳಿ ಮೋಹನ್ ಮಾತನಾಡಿ, ಮಹನೀಯರ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಲು ಅಧಿಕಾರಿಗಳು ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕು ಎಂದು ಮನವಿ ಮಾಡಿದರು. ಅಂಬೇಡ್ಕರ್ ಅವರ ತತ್ವಗಳನ್ನು ಯುವಜನತೆಗೆ ತಲುಪಿಸುವಲ್ಲಿ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.



ಉಪನ್ಯಾಸಕ ವೆಂಕಟೇಶ್ ಮಾತನಾಡಿ, ದೇಶದಲ್ಲಿ ಇನ್ನೂ ಮುಂದುವರಿಯುತ್ತಿರುವ ಜಾತಿ ತಾರತಮ್ಯ, ದೌರ್ಜನ್ಯ ಹಾಗೂ ಸಾಮಾಜಿಕ ಅನ್ಯಾಯಗಳ ಬಗ್ಗೆ ಗಂಭೀರವಾಗಿ ಚರ್ಚಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ದಲಿತರ ಮೇಲಿನ ಅನ್ಯಾಯಗಳು ಮುಂದುವರಿಯುತ್ತಿರುವುದು ವಿಷಾದಕರ ಎಂದು ಹೇಳಿದರು.

ರಾಷ್ಟ್ರೀಯ ಅಪರಾಧ ದಾಖಲೆ ಬ್ಯೂರೋ ವರದಿಗಳನ್ನು ಉಲ್ಲೇಖಿಸಿ, ದಲಿತರ ಮೇಲಿನ ಹಿಂಸಾಚಾರ ಗಂಭೀರವಾಗಿದ್ದು, ಸಮಾಜ ಆತ್ಮ ಪರಿಶೀಲನೆ ಮಾಡಿಕೊಳ್ಳಬೇಕಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಜಾತಿ ನಿರ್ಮೂಲನೆಗಾಗಿ ಜೀವನ ಪೂರ್ಣ ಹೋರಾಟ ನಡೆಸಿದ್ದು, ಸಮಾನತೆ, ನ್ಯಾಯ ಮತ್ತು ಸಹೋದರತ್ವದ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಜಾತಿ ಆಧಾರಿತ ಭೇದ ಭಾವವನ್ನು ತೊಡೆದು ಹಾಕಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಪಟ್ಟಣದ ತಾಲೂಕು ಆಡಳಿತ ಕಚೇರಿ ಎದುರು ಅಂಬೇಡ್ಕರ್ ಅವರ ಪ್ರತಿಮೆಗೆ ಶಾಸಕ ಸಿಮೆಂಟ್ ಮಂಜು ಅವರು ಮಾಲಾರ್ಪಣೆ ಮಾಡಿದರು. ತಾಲೂಕು ಪಂಚಾಯಿತಿ ಆವರಣದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಮುರಳಿ ಮೋಹನ್ ಅವರ ನೇತೃತ್ವದಲ್ಲಿ ಅಂಬೇಡ್ಕರ್ ಜಯಂತಿ ಆಚರಣೆ ನಡೆಯಿತು. ಹಳೆ ಬಸ್ ನಿಲ್ದಾಣದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಕೂಡ ಮಾಲಾರ್ಪಣೆ ಸಲ್ಲಿಸಲಾಯಿತು.

ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಆಯೋಜಿಸಲಾದ ಮೆರವಣಿಗೆ ತಾಲೂಕು ಕಚೇರಿಯಿಂದ ಆರಂಭವಾಗಿ ಹೇಮಾವತಿ ಸೇತುವೆ ವರೆಗೆ ಸಾಗಿತು. ಅಲ್ಲಿಂದ ಮರುವಾಗಿ ಅಂಬೇಡ್ಕರ್ ಭವನದವರೆಗೆ ಮೆರವಣಿಗೆ ಮುಂದುವರಿಯಿತು. ಮೆರವಣಿಗೆಯಲ್ಲಿ ನಾಸಿಕ್ ಡೋಲುಗಳ ನಾದಕ್ಕೆ ಭಾಗವಹಿಸಿದವರು ಉತ್ಸಾಹದಿಂದ ಹೆಜ್ಜೆ ಹಾಕಿದರು.

ಕಾರ್ಯಕ್ರಮದಲ್ಲಿ ನಗರ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಸಯದ್ ಮುಫೀಜ್, ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ಸಿಡಿಪಿಒ ಮಂಗಳಗೌರಿ, ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಶಾಂತ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ್, ಗ್ರೇಡ್ ಟು ತಹಸಿಲ್ದಾರ್ ಜನಾರ್ಧನ್, ಕಂದಾಯ ನಿರೀಕ್ಷಕ ದಾನ್ ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ದೊಡ್ಡಕಾಡನೂರು ಜೆಎಸ್‌ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನ

• ಪ್ರಜೋದಯ ವರದಿ

**ಹೊಳೆನರಸೀಪುರ:** ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ತಾಲ್ಲೂಕಿನ ದೊಡ್ಡಕಾಡನೂರು ಗ್ರಾಮದಲ್ಲಿ ಜೆಎಸ್‌ಎಸ್ ಪ್ರೌಢಶಾಲೆ ಮತ್ತು ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ಕಾರ್ಯನಿರ್ವಹಿಸುತ್ತಿವೆ. ಇದರ ಜೊತೆಗೆ ಜೆಎಸ್‌ಎಸ್ ಅನಾಥಾಲಯ ಕೂಡ ಕಾರ್ಯನಿರ್ವಹಿಸುತ್ತಿದೆ. ಜೆಎಸ್‌ಎಸ್ ಪ್ರೌಢಶಾಲೆಗೆ 8, 9 ಮತ್ತು 10ನೇ ತರಗತಿಗೆ ಪ್ರವೇಶ ನೀಡಲಾಗುತ್ತದೆ. ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿಗೆ ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಪ್ರವೇಶ ನೀಡಲಾಗುತ್ತದೆ.

ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ವಯಾಸಂಗ ಮಾಡುತ್ತಿರುವ ಹುಡುಗರಿಗೆ ಮಾತ್ರ ಜೆಎಸ್‌ಎಸ್ ಅನಾಥಾಲಯಕ್ಕೆ ಉಚಿತವಾಗಿ ಪ್ರವೇಶ ನೀಡಲಾಗುತ್ತದೆ. ಆದ್ದರಿಂದ ಈ ಭಾಗದ ಬಡ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ 2026-27ನೇ ಸಾಲಿಗೆ ಜೆಎಸ್‌ಎಸ್ ಅನಾಥಾಲಯಕ್ಕೆ ಅರ್ಜಿ ಆಹ್ವಾನ ಮಾಡಲಾಗಿದೆ ಎಂದು ಮುಖ್ಯೋಪಾಧ್ಯಾಯ ಹಾಗೂ ನಿಲಯಪಾಲಕ ಸುರೇಶ್ ಪಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಅನಾಥಾಲಯದಲ್ಲಿರುವ ಸೌಲಭ್ಯಗಳು:** 8, 9 ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಹುಡುಗರಿಗೆ ಮಾತ್ರ ಉಚಿತವಾಗಿ ಪ್ರವೇಶ ನೀಡಲಾಗುತ್ತದೆ.

ಯಾವುದೇ ಶುಲ್ಕವಿರುವುದಿಲ್ಲ. ಉಚಿತ ಊಟ ಮತ್ತು ವಸತಿ ಸೌಲಭ್ಯವಿರುತ್ತದೆ. ಆದ್ದರಿಂದ ಆಸಕ್ತರು ನಿಲಯ ಪಾಲಕ ಸುರೇಶ್ ಪಿ. (ಮೊ.ಸಂ: 8861397042) ಮತ್ತು ಸಹಾಯಕ ಮಲ್ಲೇಶ್ ಕೆ.ಪಿ. (ಮೊ.ಸಂ: 9663788363) ಯವರಿಗೆ ದೂರವಾಣಿ ಕರೆ ಮಾಡಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದಾಗಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಅಂಬೇಡ್ಕರ್ ಆಶಯ ಅರಿತು ಅಭಿವೃದ್ಧಿಗೆ ಶ್ರಮಿಸಬೇಕು

» ಮೊದಲನೇ ಪುಟದಿಂದ

ಸಮಾನತೆಯ ಹರಿಕಾರ ಬಾಬಾ ಸಾಹೇಬ್ ಅಂಬೇಡ್ಕರ್ ವಿಶ್ವಕ್ಕೆ ಶ್ರೇಷ್ಠ ಸಂವಿಧಾನ ನೀಡುವ ಮೂಲಕ ಮಾದರಿಯಾಗಿದ್ದಾರೆ. ಮಹಿಳೆಯ ರಿಗೂ ಸಂವಿಧಾನದಲ್ಲಿ ವಿಶೇಷ ಸ್ಥಾನಮಾನ ನೀಡಿರುವುದು ಹೆಮ್ಮೆಯ ಸಂಗತಿ, ಅವರ ತತ್ವ ಆದರ್ಶಗಳನ್ನು ಇತರರಿಗೂ ತಿಳಿಸುವ ಮೂಲಕ ಅವರ ಸಮ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಬೇಕು. ಶಿಕ್ಷಣ, ಸಂಘಟನೆ ಹಾಗು ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಬಹುದೆಂಬ ಮಾತುಗಳನ್ನು ಹೇಳುವ ಮೂಲಕ ಅವರ ತತ್ವ, ಆದರ್ಶಗಳನ್ನು ಪಾಲಿಸ ಬೇಕೆಂದು ಕರೆ ನೀಡಿದರು.

ಪ್ರತಿ ಹಳ್ಳಿಯಲ್ಲೂ ಹೇಗೆ ದೇವಸ್ಥಾನ ಇರುತ್ತದೆ ಅದೇ ರೀತಿ ಶಾಲೆ ಇರಬೇಕು. ಸಮಾಜದಲ್ಲಿರುವ ಪ್ರತಿಯೊಬ್ಬ ಕಟ್ಟ ಕಡೆಯ ವ್ಯಕ್ತಿಗೂ ಸಹ ಶಿಕ್ಷಣ ಮುಖ್ಯ, ಶಿಕ್ಷಣವನ್ನು ಪಡೆದರೆ ಎಲ್ಲವನ್ನು ಸಾಧಿಸಬಹುದೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಜಗತ್ತಿನ ಇತಿಹಾಸದಲ್ಲಿ ಸೂರ್ಯ ಚಂದ್ರ ಇರುವವರೆಗೂ ಆಧುನಿಕ ಭಾರತದ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಹೆಸರು ಅಮರ. ಜ್ಞಾನದಿಂದ ಮಾತ್ರ ಅಜ್ಞಾನವನ್ನು ತೊಳೆಯಲು ಸಾಧ್ಯ, ಜ್ಞಾನವಿದ್ದರೆ ಜಗತ್ತಿನಲ್ಲಿ ಎಲ್ಲವನ್ನು ಗೆಲ್ಲಲು ಸಾಧ್ಯ. ಹೀಗಾಗಿಯೇ ಅಂಬೇಡ್ಕರ್ ಅವರು ಪ್ರಮುಖವಾಗಿ ಶಿಕ್ಷಣ, ಸಂಘಟನೆ ಹೋರಾಟಗಳಿಗೆ ಹೆಚ್ಚಾಗಿ ಒತ್ತು ನೀಡುತ್ತಿದ್ದರು. ಪ್ರತಿಯೊಬ್ಬ ಪ್ರಜೆಯೂ ಕೂಡ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು ಎಂದರು.



**ಜಿಲ್ಲಾಧಿಕಾರಿಯಿಂದ ಪುಸ್ತಕ ಉಡುಗೊರೆ**

**ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಮೆಟ್ರಿಕ್ ನಂತರದ 16 ವಿದ್ಯಾರ್ಥಿ ನಿಲಯಗಳ ಗ್ರಂಥಾಲಯಗಳಿಗೆ, ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನಕ್ಕಾಗಿ, ಪ್ರತಿ ನಿಲಯಕ್ಕೆ 5000 ರೂ. ಮೌಲ್ಯಗಳಂತೆ ಒಟ್ಟು 90,000 ರೂ. ಮೌಲ್ಯದ ಪುಸ್ತಕಗಳನ್ನು ಜಿಲ್ಲಾಧಿಕಾರಿ ಉಡುಗೊರೆಯಾಗಿ ನೀಡಿದರು.**

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪಟೇಲ್ ಶಿವಪ್ಪ ಅವರು ಮಾತನಾಡಿ, ವರ್ಷದ 365 ದಿನವು ಬಾಬಾ ಸಾಹೇಬ್ ಅವರ ಬಗ್ಗೆ ತಿಳಿದುಕೊಂಡು, ಅವರ ಬರೆದಿರುವಂತಹ ಪ್ರಸಿದ್ಧ ಪುಸ್ತಕಗಳನ್ನು ಓದಿ ಜ್ಞಾನವನ್ನು ಹೆಚ್ಚಿಸಿಕೊಳ್ಳಿ. ಸಮಾಜದಲ್ಲಿ ಯಾವುದೇ ರೀತಿ ಜಾತಿಬೇಧ, ಧರ್ಮ ಬೇಧ ಎಂಬುವುದು ಬರಬಾರದು ಎಲ್ಲರೂ ಕೂಡ ಸಮಾನವಾಗಿ ಜೀವನ ಸಾಗಿಸಬೇಕೆಂದು ತಿಳಿಸಿದರು.

ಅಕ್ಕ ಐ.ಎ.ಎಸ್ ಅಕಾಡೆಮಿ ಮುಖ್ಯಸ್ಥ ಡಾ.ಶಿವಕುಮಾರ್ ಅವರು ಮಾತನಾಡಿ, ಭಾರತ ದೇಶವನ್ನು ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿ ಮಾಡಿದವರು ಡಾ.ಬಿ.ಆರ್. ಅಂಬೇಡ್ಕರ್. ಭಾರತ ದೇಶದಲ್ಲಿ ಮೊದಲಿಗೆ ಮಹಿಳೆಯ ಪರ ಧ್ವನಿ ಎತ್ತಿದ ಅವರು, ಮಹಿಳೆಯರಿಗೂ ಸಹ ಸಮಾನತೆಯಿಂದ ಎಲ್ಲವೂ ದೊರಕಬೇಕೆಂಬ ಆಲೋಚನೆ ಹೊಂದಿ ಸಂವಿಧಾನದಲ್ಲಿ ಸಮಾನ ಅವಕಾಶ ನೀಡಿದ್ದಾರೆ. ಭಾರತ ದೇಶದ ಶಿಕ್ಷಣದ ರೂವಾರಿಯಾಗಿ, ಪ್ರತಿಯೊಬ್ಬ ಬಡಮಕ್ಕಳಿಗೂ ಸಹ ಶಿಕ್ಷಣ ಸಿಗಬೇಕೆಂಬ ನಿಟ್ಟಿನಲ್ಲಿ ಹೋರಾಟ ನಡೆಸಿದವರು. ಬಾಬಾ ಸಾಹೇಬ್ ಅವರಿಗೆ ಗೌರವ ಬಂದಿದ್ದು, ಜ್ಞಾನದಿಂದ ಮತ್ತು ಅವರ ನಡವಳಿಕೆಯಿಂದ ಎಂದು ತಿಳಿಸಿದರು.

**ಮೆರವಣಿಗೆಗೆ ಚಾಲನೆ**

**ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಪುತ್ಥಳಿಗೆ ಹಲವು ಗಣ್ಯರು ಮಾಲಾರ್ಪಣೆ ಮಾಡಿ ನಂತರ ಅಂಬೇಡ್ಕರ್ ಭಾವ ಚಿತ್ರದ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ಶಾಸಕರಾದ ಹೆಚ್.ಪಿ. ಸ್ವರೂಪ್, ಮಾಜಿ ಶಾಸಕರಾದ ಹೆಚ್.ಕೆ. ಕುಮಾರಸ್ವಾಮಿ, ಸಮುದಾಯ ಮುಖಂಡರು ಸೇರಿ ನೂರಾರು ಜನರು ಭಾಗವಹಿಸಿದ್ದರು. ವಿಜೃಂಭಣೆಯಿಂದ ನಡೆದ ಮೆರವಣಿಗೆ ಎನ್.ಆರ್.ವೃತ್ತ, ಹೇಮಾವತಿ ಪ್ರತಿಮೆ, ಮಹಾವೀರ ವೃತ್ತದ ಮೂಲಕ ಕಲಾಭವನ ತಲುಪಿತು.**

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಚ್.ಎಲ್.ಮಲ್ಲೇಶಗೌಡ, ದಲಿತ ಸಂಘಟನೆ ಮುಖಂಡ ಹೆಚ್.ಕೆ.ಸಂದೇಶ್ , ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರಾದ ದೂದ್‌ಫೀರ್, ತಹಶೀಲ್ದಾರ್ ಗೀತಾ ಮತ್ತಿತರರು ಉಪಸ್ಥಿತರಿದ್ದರು.

# ಕಳಪೆ ರಸ್ತೆ ಕಾಮಗಾರಿ: ಶಾಸಕ ಸುರೇಶ್ ತರಾಟೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಕಳಪೆಯಾಗಿದೆ ಎಂದು ಸಾರ್ವಜನಿಕರಿಂದ ಆರೋಪ ವ್ಯಕ್ತವಾದ ಹಿನ್ನಲೆಯಲ್ಲಿ ಶಾಸಕ ಹೆಚ್.ಕೆ.ಸುರೇಶ್ ಮಂಗಳವಾರ ಪರಿಶೀಲನೆ ನಡೆಸಿ, ಗುತ್ತಿಗೆದಾರ ಹಾಗು ಇಂಜಿನೀಯರ್‌ನ್ನು ತರಾಟೆಗೆ ತೆಗೆದುಕೊಂಡರು.

ಪಟ್ಟಣದ ಚನ್ನಕೇಶವಸ್ವಾಮಿ ಉತ್ಸವ ಬೀದಿ ಹಾಗು ವೈಕುಂಠ ದಾಸರು ಜನ್ಮತಾಳಿದ ವೈಕುಂಠ ಬೀದಿಯಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿ ಸದ್ಯ ಪ್ರಗತಿಯಲ್ಲಿದ್ದು, ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿದರು. ಈ ವೇಳೆ ಸ್ಥಳೀಯ ನಿವಾಸಿಗಳು ಕಾಮಗಾರಿಯ ಕಳಪೆ ಗುಣಮಟ್ಟದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾತನಾಡಿದ ಸ್ಥಳೀಯರು, ಶಾಸಕರು ತಮ್ಮ ಪ್ರಯತ್ನದಿಂದ ಅನುದಾನ ತಂದಿದ್ದರೂ, ಗುತ್ತಿಗೆದಾರ ಹಾಗೂ ಇಂಜಿನೀಯರ್ ನಿರ್ಲಕ್ಷ್ಯದಿಂದ ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದೆ. ಈಗಿರುವ ರಸ್ತೆಯನ್ನು ತಳಕ್ಕೆ ಇಳಿಸಿರುವುದರಿಂದ ವಾಹನ ಸಂಚಾರಕ್ಕೂ, ಪಾದಚಾರಿಗಳಿಗೂ ತೊಂದರೆ ಆಗಿದೆ. ಈ ಬಗ್ಗೆ ಪ್ರಶ್ನಿಸಿದರೆ ಅಧಿಕಾರಿಗಳು ಉಡಾಫೆಯಾಗಿ ವರ್ತಿಸುತ್ತಿದ್ದಾರೆಂದು ಆರೋಪಿಸಿದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಪಟ್ಟಣ ಸುಮಾರು 900 ವರ್ಷಗಳ ಇತಿಹಾಸ ಹೊಂದಿದೆ. ಚನ್ನಕೇಶವಸ್ವಾಮಿ ದೇವಸ್ಥಾನ ಹಾಗು ವೈಕುಂಠ ಬೀದಿ ಸೇರಿ ಉತ್ಸವ ಬೀದಿಗಳ ಮಹತ್ವವನ್ನು ಗಮನದಲ್ಲಿಟ್ಟುಕೊಂಡು ಗುಣಮಟ್ಟದ ರಸ್ತೆ ನಿರ್ಮಾಣಕ್ಕಾಗಿ ಅನುದಾನ ತರಲಾಗಿದೆ. ಆದರೆ, ಕೆಲವೆಡೆ ಕಾಮಗಾರಿ ನಿರೀಕ್ಷಿತ ಮಟ್ಟದಲ್ಲಿ ಇಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು.



ಗುತ್ತಿಗೆದಾರ ಹಾಗು ಇಂಜಿನೀಯರ್‌ಗಳಿಗೆ ಈಗಾಗಲೇ ಹಲವು ಬಾರಿ ಎಚ್ಚರಿಕೆ ನೀಡಲಾಗಿದೆ. ಸಾರ್ವಜನಿಕರಿಗೆ ತೊಂದರೆ ಆಗದಂತೆ, ಗುಣಮಟ್ಟ ಕಾಪಾಡಿಕೊಂಡು ಕಾಮಗಾರಿಯನ್ನು ತಕ್ಷಣ ಸರಿಪಡಿಸಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಪುರಸಭೆ ಮುಖ್ಯಾಧಿಕಾರಿ ಬಸವರಾಜು ಶಿಗ್ಗಾವಿ, ಇಂಜಿನೀಯರ್ ಮೋಹನ್, ಮುಖಂಡರಾದ ಹೆಚ್.ಎಂ. ದಯಾನಂದ, ಸಿ.ಎಸ್. ಪ್ರಕಾಶ್, ನಾಗೇಶ್, ಸ್ಥಳೀಯ ನಿವಾಸಿಗಳು ಇದ್ದರು.

## ಅಂಬೇಡ್ಕರ್ ಪುತ್ಥಳಿಗೆ ಅಗೌರವ : ಖಂಡನೆ

» ಮೊದಲನೇ ಪುಟದಿಂದ

ಈಗಾಗಲೇ ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟ ಸಚಿವರಿಗೆ ತಹಶೀಲ್ದಾರ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿದೆ ಎಂದರು.

ವಿಶ್ವದಾದ್ಯಂತ ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಅತ್ಯಂತ ಭಕ್ತಿ ಭಾವದಿಂದ ಆಚರಿಸುತ್ತಿದ್ದಾರೆ. ಬೇಲೂರು ತಾಲ್ಲೂಕು ಆಡಳಿತ ಅಂಬೇಡ್ಕರ್ ಜಯಂತಿ ಕಾರ್ಯಕ್ರಮದ ದಿನ ಕನಿಷ್ಠ ವಿಶೇಷ ಅಲಂಕಾರ ಮತ್ತು ಅಚ್ಚುಕಟ್ಟಾಗಿ ಸಮಾರಂಭ ನಡೆಸಲು ಸಂಪೂರ್ಣ ವೈಫಲ್ಯವಾಗಿದೆ. ತಾಲ್ಲೂಕು ಆಡಳಿತದಿಂದ ಇತ್ತೀಚಿನ ದಿನಗಳಲ್ಲಿ ಹಗಲು ದರೋಡೆ ನಡೆಯುತ್ತಿದೆ. ಮಧ್ಯವರ್ತಿಗಳ ಹಾವಳಿಯಿಂದ ಬಡವರ ಮತ್ತು ಮಹಿಳೆಯರ ಕೆಲಸ ಮಾಡುತ್ತಿಲ್ಲ, ಸ್ವತಃ ತಹಶೀಲ್ದಾರ್ ಇಲ್ಲಿನ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡುತ್ತಿದ್ದಾರೆಂದು ಗಂಭೀರ ಆರೋಪ ಮಾಡಿದರು.

ದಲಿತ ಸಂಘಟನೆ ಮುಖಂಡರಾದ ಪರ್ವತಯ್ಯ, ರಮೇಶ್, ಚಂದ್ರಶೇಖರ ಮತ್ತು ಎಂ.ಜಿ.ವೆಂಕಟೇಶ ಅವರು ಮಾತನಾಡಿ, ಶೋಷಿತರ ಮತ್ತು ಬಡವರ ಪಾಲಿನ ಆಶಾಕಿರಣವಾದ ಅಂಬೇಡ್ಕರ್ ಇಡೀ ಜಗತ್ತು ಅವರಿಗೆ ಗೌರವ ನೀಡುತ್ತದೆ. ಅಂಬೇಡ್ಕರ್ ನೀಡಿದ ಸಂವಿಧಾನದ ಅಡಿಯಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿಗಳು ಅಂಬೇಡ್ಕರ್ ಎಂಬ ಮಹಾನ್ ವ್ಯಕ್ತಿಗೆ ಅವಮಾನ ಎಸಗಿಸುವುದು ನಿಜಕ್ಕೂ ಶೋಚನೀಯವೆಂದು ಅಸಮಾಧಾನ ಹೊರ ಹಾಕಿದರು.

ಪ್ರತಿಭಟನೆ ನಂತರ ಏ.15ರ ಬೆಳಿಗ್ಗೆ 10 ಗಂಟೆಗೆ ತಾಲ್ಲೂಕು ಕಚೇರಿ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲು ದಲಿತ ಸಂಘಟನೆಗಳು ನಿರ್ಧರಿಸಿವೆ. ಬಿಜೆಪಿ ಅಧ್ಯಕ್ಷ ಸಂಜು ಕೌರಿ. ಬಿಜೆಪಿ ಮಾಜಿ ಅಧ್ಯಕ್ಷ ರೇಣುಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಎಸ್.ಪ್ರಕಾಶ್, ಕಾಂಗ್ರೆಸ್ ಮುಖಂಡ ಗ್ರಾನೈಟ್ ರಾಜಶೇಖರ, ದಲಿತ ಮುಖಂಡರಾದ ಈಶ್ವರ್ ಪ್ರಸಾದ್, ಗೋಪಿನಹಳ್ಳಿ ರವಿ. ಮಂಜುನಾಥ, ಬಸವರಾಜು, ನೂರ್ ಅಹಮದ್ ಇದ್ದರು.

## ಅಂಬೇಡ್ಕರ್ ಜಯಂತಿಯಲ್ಲಿ ಪೌರಕಾರ್ಮಿಕರಿಗೆ ಸನ್ಮಾನ

» ಮೊದಲನೇ ಪುಟದಿಂದ

ಸಂಘದಲ್ಲಿ ನಿರಂತರವಾಗಿ ವಿಭಿನ್ನ ಚಟುವಟಿಕೆ ನಡೆಯಬೇಕು. ಅದಕ್ಕೆ ಎಲ್ಲರ ಸಹಕಾರ ಇರಬೇಕು.ಮಹನೀಯರ ಸ್ಮರಣೆ ಎಲ್ಲರ ಆದ್ಯ ಕರ್ತವ್ಯ, ಸಮಾಜದಲ್ಲಿ ಎಲ್ಲಾ ವರ್ಗಗಳಿಗೆ ಸಮಾನತೆ, ಹಕ್ಕು ಒದಗಿಸಿಕೊಟ್ಟವರು ಅಂಬೇಡ್ಕರ್ ಎಂದರು. ಹಾಗೆಯೇ ಪ್ರಮೋದ್ ಅವರು ಅನೇಕ ವರ್ಷಗಳಿಂದ ಅಮೋಘ ವಾಹಿನಿ ಮೂಲಕ ಜನಮೆಚ್ಚುಗೆಗೆ ಪಾತ್ರರಾಗಿದ್ದಾರೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೆ.ಪಿ.ಎಸ್.ಪ್ರಮೋದ್ ಅವರು, ಹಾಸನದಲ್ಲಿ ಮೊದಲ ಬಾರಿಗೆ 1992 ರಲ್ಲಿ ಹೆಚ್‌ಸಿಎನ್ ವಾಹಿನಿ ಮೂಲಕ ಸುದ್ದಿ ಚಾನೆಲ್ ಆರಂಭಿಸಿದೆವು. ಅದಕ್ಕೆ ದಿ||ರಾಜ್ ಕುಮಾರ್ ಸಹಕಾರ ನೀಡಿದ್ದರು. ಆಗಲೇ ನಾವು ಮಹಾಮಸ್ತಕಾಭಿಷೇಕ ಸೇರಿ ಹಲವು ಕಾರ್ಯಕ್ರಮಗಳನ್ನು ನೇರ ಪ್ರಸಾರ ಮಾಡಿದ್ದೆವು. 20 ವರ್ಷದಿಂದ ಅಮೋಘ್ ವಾಹಿನಿ ಮುನ್ನಡೆಸುತ್ತಿದ್ದೇನೆ. ಈಗ ರಾಜ್ಯದ ವಿವಿಧೆಡೆ ಪ್ರಸಾರ ಆಗುತ್ತಿದೆ. ಇದಕ್ಕೆ ಅನಿತಾ ಕುಮಾರಸ್ವಾಮಿ, ಮದನಗೌಡ, ರಂಗಸ್ವಾಮಿ ಅವರು ಸಹಕಾರ ನೀಡಿದ್ದಾರೆಂದು ಸ್ಮರಿಸಿದರು.

ಸಂಘದ ಮಾಜಿ ಅಧ್ಯಕ್ಷರಾದ ಲೀಲಾವತಿ, ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಹೆಚ್.ವಿ.ಸುರೇಶ್ ಕುಮಾರ್, ಪತ್ರಕರ್ತರಾದ ಎಂ.ಎಸ್.ಸ್ವಾಗತ್, ಕೆ.ಬಿ.ಮಂಜುನಾಥ್, ಎಸ್.ಡಿ.ರಂಗಸ್ವಾಮಿ, ಕಾರ್ಯದರ್ಶಿಗಳಾದ ಖುಷ್ವಂತ್, ಬಿ.ಆರ್. ಬೊಮ್ಮೇಗೌಡ, ಬೇಲೂರು ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ಬಿ. ಶಿವರಾಜು, ಆಲೂರು ಅಧ್ಯಕ್ಷ ಆದಿಲ್ ಪಾಷ ಮತ್ತಿತರರು ಮಾತನಾಡಿದರು. ಖಜಾಂಚಿ ಪ್ರಕಾಶ್ ಬೆಳವಾಡಿ,ಕೆ.ಎಂ. ಹರೀಶ್ ಇದ್ದರು.

## ಸಾಮ್ರಾಟ್ ಚೌಧರಿ ಬಿಹಾರದ ನೂತನ ಸಿಎಂ

• ಪ್ರಜೋದಯ ವರದಿ



**ಪಟ್ನಾ:** ಬಿಹಾರದ ಮುಖ್ಯಮಂತ್ರಿ ಸ್ಥಾನಕ್ಕೆ ನಿತೀಶ್ ಕುಮಾರ್ ರಾಜೀನಾಮೆ ಸಲ್ಲಿಸಿದ ಬೆನ್ನಲ್ಲೇ ನೂತನ ಸಿಎಂ ಆಗಿ ಸಾಮ್ರಾಟ್ ಚೌಧರಿ ಅವರು ಆಯ್ಕೆಯಾಗಿದ್ದಾರೆ.

ಮಂಗಳವಾರ ಪಟ್ನಾದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ತಮ್ಮ ಅಂತಿಮ ಸಚಿವ ಸಂಪುಟ ಸಭೆ ನಡೆಸಿದರು. ಈ ವೇಳೆ ಭಾವುಕರಾದ ಅವರು, ಸಂಪುಟ ಸಭೆ ಬಳಿಕ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್, ಬಿಹಾರ ಬಿಜೆಪಿ ಅಧ್ಯಕ್ಷ ಸಂಜಯ್‌ಸರೋಗಿ, ಬಿಹಾರ ಉಪ ಮುಖ್ಯಮಂತ್ರಿಗಳಾದ ಸಾಮ್ರಾಟ್ ಚೌಧರಿ ಮತ್ತು ವಿಜಯ್ ಕುಮಾರ್ ಸಿನ್ಹಾ ಮತ್ತು ಇತರೆ ಪಕ್ಷದ ನಾಯಕರು ಸಭೆಯಲ್ಲಿ ಭಾಗವಹಿಸಿದ್ದರು. ಹೊಸದಾಗಿ ಆಯ್ಕೆಯಾದ ರಾಜ್ಯಸಭಾ ಸಂಸದ ನಿತೀಶ್ ಕುಮಾರ್ ಬಿಹಾರ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಸಾಮ್ರಾಟ್ ಚೌಧರಿ ಅವರನ್ನು ಆಯ್ಕೆ ಮಾಡಲಾಯಿತು. ಬುಧವಾರ ಬಿಹಾರದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬರಲಿದ್ದು, ಮುಖ್ಯಮಂತ್ರಿ ಜೊತೆಗೆ, ಇಬ್ಬರು ಶಾಸಕರು ಉಪಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆಂದು ಮೂಲಗಳು ತಿಳಿಸಿವೆ.

## 15ನೇ ದಿನವೂ ಅಹೋರಾತ್ರಿ ಧರಣಿ




• ಪ್ರಜೋದಯ ವರದಿ

**ಹಾಸನ:** ಭೋವಿ ಸಮುದಾಯದ ಪಾರಂಪರಿಕ ಕಲ್ಲು ಗಣಿಗಾರಿಕೆಯನ್ನು ಪುನರ್ ಆರಂಭಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಕಳೆದ 15 ದಿನಗಳಿಂದ ನಡೆ ಯುತ್ತಿರುವ ಅಹೋರಾತ್ರಿ ಧರಣಿ ಮಂಗಳವಾರ ತೀವ್ರಗೊಂಡಿತು.

ಅಂಬೇಡ್ಕರ್ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಧರಣಿ ನಿರತರು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಶಾಸಕ ಹೆಚ್.ಪಿ.ಸ್ವರೂಪ್ ಹಾಗು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಾಕಾರರ ಮನವಿ ಆಲಿಸಿದರು.

ಗಣಿಗಾರಿಕೆ ನಿಲ್ಲುವುದರಿಂದ ನೂರಾರು ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ. ತಕ್ಷಣ ಪುನರ್ ಆರಂಭಕ್ಕೆ ಅವಕಾಶ ನೀಡಬೇಕೆಂದು ಭೋವಿ ಸಮುದಾಯದವರು ಒತ್ತಾಯಿಸಿದರು. 60ಕ್ಕೂ ಹೆಚ್ಚು ಕಾರ್ಮಿಕರು ನೇರವಾಗಿ ಹಾಗೂ 200ಕ್ಕೂ ಹೆಚ್ಚು ಕುಟುಂಬಗಳು ಪರೋಕ್ಷವಾಗಿ ಈ ಉದ್ಯೋಗದ ಮೇಲೆ ಅವಲಂಬಿತವಾಗಿವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಲತಾಕುಮಾರಿ ಅವರು ಮಾತನಾಡಿ, ಮನೆಗಳಿಗೆ ಬಿರುಕು ಬಿದ್ದಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನಲೆ ತಾಂತ್ರಿಕ ಪರಿಶೀಲನೆ ನಡೆಸಿ ವರದಿ ಆಧಾರದಲ್ಲಿ ತೀರ್ಮಾನ ಕೈಗೊಳ್ಳಲಾಗುತ್ತದೆಂದು ಸ್ಪಷ್ಟಪಡಿಸಿದರು. ಶಾಸಕರು ಮತ್ತು ಮಾಜಿ ಸಚಿವರು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಭರವಸೆ ನೀಡಿದರು.



ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK